# ರಥಬೀದಿ ಗೆಳೆಯರು (ರಿ.) ಉಡುಪಿ

**ರಥಬೀದಿ ಗೆಳೆಯರು (ರಿ.) ಉಡುಪಿ ಸಾಂಸ್ಕೃತಿಕ ವೇದಿಕೆ, ವಾರ್ಷಿಕ ವರದಿ 2018–19**

## 2018–19 ವಾರ್ಷಿಕ ವರದಿ :

**ಬಣ್ಣದ ಹೆಜ್ಜೆ ರಂಗ ತರಬೇತಿ ನಿರ್ದೇಶಕರ ಕಾರ್ಯಾಗಾರ :** ರಥಬೀದಿ ಗೆಳೆಯರು (ರಿ.) ಉಡುಪಿ, ಸಂಗಮ ಕಲಾವಿದೆರ್ ಮಣಿಪಾಲ (ರಿ.) ಸಂಸ್ಥೆಗಳು ಆಯೋಜಿಸಿದ ಬಣ್ಣದ ಹೆಜ್ಜೆ ರಂಗ ತರಬೇತಿಯ ನಿರ್ದೇಶಕರ ಕಾರ್ಯಾಗಾರ "ಸೃಜನ ಕೌಶಲ"ವನ್ನು ತೆಂಕನಿಡಿಯೂರು ಕಾಲೇಜಿನ ಸ್ನಾತಕೋತ್ತರ ಕೇಂದ್ರದ ಆಂಗ್ಲ ಭಾಷಾ ವಿಭಾಗದ ಮುಖ್ಯಸ್ಥ ಪ್ರೊ| ಎಂ. ಪ್ರಸಾದ್ ರಾವ್ ಉದ್ಘಾಟಿಸಿ ಮಾತನಾಡಿದರು. ಪ್ರೊ| ಮುರಳೀಧರ ಉಪಾಧ್ಯ ಅಧ್ಯಕ್ಷತೆ ವಹಿಸಿದ್ದರು. ಡಾ| ಶ್ರೀಪಾದ ಭಟ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಉದ್ಯಾವರ ನಾಗೇಶ್ ಕುಮಾರ್ ಸ್ವಾಗತಿಸಿ, ಶ್ರೀ ಲಕ್ಷ್ಮಣ ಪೆರಂಪಳ್ಳಿ ವಂದಿಸಿದರು.

**ಮಕ್ಕಳ ರಂಗ ತರಬೇತಿ ಶಿಬಿರ :** ರಥಬೀದಿ ಗೆಳೆಯರು (ರಿ.) ಉಡುಪಿ ಮತ್ತು ಸಂಗಮ ಕಲಾವಿದೆರ್ ಮಣಿಪಾಲ (ರಿ.) ಇವರ ಜಂಟಿ ಆಶ್ರಯದಲ್ಲಿ ಡಾ| ಶ್ರೀಪಾದ ಭಟ್ ನಿರ್ದೇಶನದಲ್ಲಿ ಬಣ್ಣದ ಹೆಜ್ಜೆ ಮಕ್ಕಳ ರಂಗ ತರಬೇತಿ ಶಿಬಿರವು ಏಪ್ರಿಲ್ 13ರಿಂದ ಏಪ್ರಿಲ್ 24ರ ವರೆಗೆ ಮಣಿಪಾಲ ಪದವಿ ಪೂರ್ವ ಕಾಲೇಜು, ಮಣಿಪಾಲದಲ್ಲಿ ಜರುಗಿತು. ಈ ಶಿಬಿರದ ಉದ್ಘಾಟನೆಯನ್ನು ಲೇಖಕ ಶ್ರೀ ರಾಜಾರಾಂ ತಲ್ಲೂರು ನೆರವೇರಿಸಿದರು. "ರಥಬೀದಿ ಗೆಳೆಯರು" ಸಂಘಟನೆ ಕಾರ್ಯದರ್ಶಿ ಪ್ರೊ| ಸುಬ್ರಹ್ಮಣ್ಯ ಜೋಶಿ "ಸಂಗಮ ಕಲಾವಿದೆರ್"ನ ಅಧ್ಯಕ್ಷ ಶ್ರೀ ಲಕ್ಷ್ಮಣ ಪೆರಂಪಳ್ಳಿ ಉಪಸ್ಥಿತರಿದ್ದರು. ಶಿಬಿರದ ಸಂಚಾಲಕ ಶ್ರೀ ಉದ್ಯಾವರ ನಾಗೇಶ್ ಕುಮಾರ್ ಸ್ವಾಗತಿಸಿದರು. ಶ್ರೀ ಸಂತೋಷ್ ಶೆಟ್ಟಿ ಹಿರಿಯಡ್ಕ ಕಾರ್ಯಕ್ರಮ ನಿರೂಪಿಸಿದರು. ಶಿಬಿರದಲ್ಲಿ ಒಟ್ಟು 160 ಶಿಬಿರಾರ್ಥಿಗಳು ಪಾಲ್ಗೊಂಡಿದ್ದರು. ತಾ. 24.04.2018ರಂದು "ಬಣ್ಣದ ಹೆಜ್ಜೆ" ಮಕ್ಕಳ ರಂಗ ತರಬೇತಿ ಶಿಬಿರದ ಸಮಾರೋಪ ಸಮಾರಂಭವು ಮಣಿಪಾಲ ಪದವಿ ಪೂರ್ವ ಕಾಲೇಜಿನಲ್ಲಿ ಜರಗಿತು. ಸಮಾರಂಭದಲ್ಲಿ ರಂಗತಜ್ಞ ಮೂರ್ತಿ ದೇರಾಜೆ ಸಾಮಾಜಿಕ ಕಾರ್ಯಕರ್ತೆ ವಿದ್ಯಾ ದಿನಕರ್ ಭಾಗವಹಿಸಿದ್ದರು. ರಥಬೀದಿ ಗೆಳೆಯರ ಅಧ್ಯಕ್ಷ ಪ್ರೊ| ಮುರಳೀಧರ ಉಪಾಧ್ಯ ಅಧ್ಯಕ್ಷತೆ ವಹಿಸಿದ್ದರು. ಸಮಾರಂಭದ ಬಳಿಕ ಶಿಬಿರಾರ್ಥಿಗಳಿಂದ ಸುಧಾ ಆಡುಕಳ ರಚಿಸಿರುವ "ನನ್ನ ಗೋಪಾಲ" ನಾಟಕ ಪ್ರದರ್ಶನಗೊಂಡಿತು. ಈ ಶಿಬಿರದ ಯಶಸ್ಸಿಗೆ ಸಹಕರಿಸಿದ ಎಲ್ಲರಿಗೂ ಧನ್ಯವಾದಗಳು.

**ನಾಟಕ ಪ್ರದರ್ಶನ :** ರಥಬೀದಿ ಗೆಳೆಯರು(ರಿ.) ಉಡುಪಿ ಮತ್ತು ಸಂಗಮ ಕಲಾವಿದೆರ್, ಮಣಿಪಾಲ (ರಿ.) ಇವರ ಜಂಟಿ ಆಶ್ರಯದಲ್ಲಿ ಥಿಯೇಟರ್ ಸಮುದಾಯ್ ಕಲ್ಚರಲ್ ಟ್ರಸ್ಟ್ ಅಭಿನಯಿಸಿದ "ಮದುವೆ ಹೆಣ್ಣು" ರಚನೆ : ಹೆಚ್.ಎಸ್.ಶಿವಪ್ರಕಾಶ್ ವಿನ್ಯಾಸ ನಿರ್ದೇಶನ : ವೆಬಿತ್ರಾ ರಾಭಾ (ಅಸ್ಸಾಂ) ನಾಟಕವು ತಾ. 28.05.2018ರಂದು ಸಂಜೆ 6.30ಕ್ಕೆ ನೂತನ ರವೀಂದ್ರ ಮಂಟಪದಲ್ಲಿ ಪ್ರದರ್ಶನಗೊಂಡಿತು. ನಾಟಕ ಪ್ರದರ್ಶನಕ್ಕೆ ಆರ್ಥಿಕ ಸಹಕಾರ ನೀಡಿದ ಸಂಗಮ ಕಲಾವಿದೆರ್ ಮಣಿಪಾಲ (ರಿ.) ತಂಡಕ್ಕೆ ಮತ್ತು ಶ್ರೀ ಲಕ್ಷ್ಮಣರಾಯ ಪ್ರಭು ಇವರಿಗೆ ಧನ್ಯವಾದಗಳು.

**ವಿಶೇಷ ಉಪನ್ಯಾಸ ಕಾರ್ಯಕ್ರಮ :** ರಥಬೀದಿ ಗೆಳೆಯರು (ರಿ.) ಉಡುಪಿ ಮತ್ತು ಗೋವಿಂದ ಪೈ ಸಂಶೋಧನ ಕೇಂದ್ರ ಸಹಯೋಗದಲ್ಲಿ ತಾ. 09.06.2018 ಶನಿವಾರ ಬೆಳಗ್ಗೆ ಪ್ರಾದೇಶಿಕ ರಂಗ ಕಲೆಗಳ ಅಧ್ಯಯನ ಕೇಂದ್ರ ಧ್ವನ್ಯಾಲೋಕದಲ್ಲಿ ಆಯೋಜಿಸಿದ್ದ "ಕಾವ್ಯ ನಾಟಕ", ಪ್ರತ್ಯಭಿಜ್ಞಾನ" ಕುರಿತ ಉಪನ್ಯಾಸ ಕಾರ್ಯಕ್ರಮದಲ್ಲಿ ರಂಗಕರ್ಮಿ ಶ್ರೀ ರಘುನಂದನ್ ಮಾತನಾಡಿದರು. ಪ್ರೊ| ಮುರಳೀಧರ ಉಪಾಧ್ಯ ಅಧ್ಯಕ್ಷತೆಯನ್ನು ವಹಿಸಿದ್ದರು. ಗೋವಿಂದ ಪೈ ಸಂಶೋಧನ ಕೇಂದ್ರದ ನಿರ್ದೇಶಕ ಪ್ರೊ| ವರದೇಶ ಹಿರೇಗಂಗೆ ಸ್ವಾಗತಿಸಿದರು. ಉಡುಪಿ ಚಿತ್ರ ಸಮಾಜದ ಸಂಚಾಲಕ ಪ್ರೊ| ಫಣಿರಾಜ್ ನಿರೂಪಿಸಿದರು. ಬಳಿಕ ಸಂವಾದ ಕಾರ್ಯಕ್ರಮ ಜರುಗಿತು.

**ವಾರ್ಷಿಕ ಮಹಾಸಭೆ :** ನಮ್ಮ ಸಂಸ್ಥೆಯ ವಾರ್ಷಿಕ ಮಹಾಸಭೆಯು ತಾ. 30.06.2018ನೇ ಶನಿವಾರ ಸಂಜೆ ಗಂಟೆ 5.00ಕ್ಕೆ ಸಂಸ್ಥೆಯ ಅಧ್ಯಕ್ಷ ಪ್ರೊ| ಮುರಳೀಧರ ಉಪಾಧ್ಯ ಇವರ ಅಧ್ಯಕ್ಷತೆಯಲ್ಲಿ ಸಂಸ್ಥೆಯ ಕಛೇರಿಯಲ್ಲಿ ಜರುಗಿತು. ಸಂಸ್ಥೆಯ ಕಾರ್ಯದರ್ಶಿ ಪ್ರೊ| ಸುಬ್ರಹ್ಮಣ್ಯ ಜೋಶಿ ಗತ ಮಹಾಸಭೆಯ ವರದಿ ಮತ್ತು 2017–18ರ ಸಾಲಿನ ವಾರ್ಷಿಕ ವರದಿಯನ್ನು ಹಾಗೂ ಖಜಾಂಚಿ ಶ್ರೀ ವೇದವ್ಯಾಸ ಭಟ್ 2017–18ರ ಸಾಲಿನ ಲೆಕ್ಕಪತ್ರ ಮಂಡನೆ ಮಾಡಿದರು.

**ಗೋಪಾಲಕೃಷ್ಣ ಅಡಿಗರ ಜನ್ಮ ಶತಮಾನೋತ್ಸವ :** ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು, ರಥಬೀದಿ ಗೆಳೆಯರು (ರಿ.) ಉಡುಪಿ ಇವರ ಸಹಯೋಗದಲ್ಲಿ ಗೋಪಾಲಕೃಷ್ಣ ಅಡಿಗರ ಜನ್ಮ ಶತಮಾನೋತ್ಸವ ಕಾರ್ಯಕ್ರಮವು ತಾ. 01.07.2018 ಆದಿತ್ಯವಾರ ಬೆಳಿಗ್ಗೆ 10ಕ್ಕೆ ನೂತನ ರವೀಂದ್ರ ಮಂಟಪ, ಎಂ.ಜಿ.ಎಂ. ಕಾಲೇಜು ಇಲ್ಲಿ ಜರುಗಿತು. ಈ ಕಾರ್ಯಕ್ರಮದ ಉದ್ಘಾಟನೆಯನ್ನು ಹಿರಿಯ ಸಾಹಿತಿ ಶ್ರೀ ಜಿ. ರಾಜಶೇಖರ ನೆರವೇರಿಸಿದರು. ಅಡಿಗ ಟ್ರಸ್ಟ್ ಬೆಂಗಳೂರು ಇದರ ಶ್ರೀ ಜಯರಾಮ ಅಡಿಗ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಡಾ| ಅರವಿಂದ ಮಾಲಗತ್ತಿ ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ಅಧ್ಯಕ್ಷತೆಯನ್ನು

ವಹಿಸಿದ್ದರು. ಕನ್ನಡ ಕಾವ್ಯಕ್ಕೆ ಅಡಿಗರ ಕೊಡುಗೆ ಬಗ್ಗೆ ಶ್ರೀ ಲಕ್ಷ್ಮೀಶ ತೋಳ್ಪಾಡಿ ಉಪನ್ಯಾಸ ನೀಡಿದರು. ಶ್ರೀ ಚಂದ್ರಶೇಖರ ಕೆದ್ಲಾಯ ಸಮಾರೋಪ ಭಾಷಣ ಮಾಡಿದರು. ಪ್ರೊ ಮುರಳೀಧರ ಉಪಾಧ್ಯ ಅಧ್ಯಕ್ಷತೆ ವಹಿಸಿದ್ದರು. ಅಡಿಗರ ಒಡನಾಟದ ನೆನಪುಗಳ ಬಗ್ಗೆ ಅಡಿಗರ ಕವನಗಳ ವಾಚನ ಮತ್ತು ಗಾಯನ ಕಾರ್ಯಕ್ರಮ ಜರುಗಿತು.

**ಗಾಂಧಿ 150 : ಗಾಂಧಿ ಚಿಂತನೆಯ ಪ್ರಸ್ತುತತೆ :** ಒಂದು ಸಂವಾದ ಕಾರ್ಯಕ್ರಮವು ತಾ. 04.09.2018ನೇ ಮಂಗಳವಾರ ಸಂಜೆ ಗಂಟೆ 5.30ಕ್ಕೆ ನೂತನ ರವೀಂದ್ರ ಮಂಟಪ ನಮ್ಮ ಸಂಸ್ಥೆಯ ಆಶ್ರಯದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಜರುಗಿತು. ಖ್ಯಾತ ಸಾಹಿತಿ ಶ್ರೀಮತಿ ವೈದೇಹಿ ಚಿಂತಕರಾದ ಪ್ರೊ ಫಣಿರಾಜ್ ಎಂಜಿಎಂ ಕಾಲೇಜಿನ ಗಾಂಧಿ ಅಧ್ಯಯನ ಕೇಂದ್ರದ ಸಂಯೋಜಕ ಶ್ರೀ ವಿನೀತ್ ರಾವ್ ಅತಿಥಿಗಳಾಗಿ ಆಗಮಿಸಿದ್ದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ "ಗಾಂಧಿ 150" ರಂಗಾಯಣ ಧಾರವಾಡ ಸಹಯೋಗದೊಂದಿಗೆ "ಒಂದು ರಂಗ ಪಯಣದಲ್ಲಿ" ಬೊಳುವಾರು ಮಹಮ್ಮದ್ ಕುಞಯವರ "ಪಾಪು ಗಾಂಧಿ ಗಾಂಧಿ ಪಾಪು ಆದ ಕತೆ" ಆಧರಿಸಿದ ರಂಗ ರೂಪಕ, ಪರಿಕಲ್ಪನೆ ಎನ್. ಆರ್. ವಿಶು ಕುಮಾರ್ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ರಂಗ ರೂಪ ನಿರ್ದೇಶನ : ಡಾ। ಶ್ರೀಪಾದ ಭಟ್ ಪ್ರದರ್ಶನಗೊಂಡಿತು.

**ಗಾಂಧಿ ಜಯಂತಿ:** ವಿಶೇಷ ಉಪನ್ಯಾಸ : ರಥಬೀದಿ ಗೆಳೆಯರು(ರಿ.) ಉಡುಪಿ ಸಾಂಸ್ಕೃತಿಕ ವೇದಿಕೆಯಿಂದ ಬಳಕೆದಾರರ ವೇದಿಕೆ ಜಿಲ್ಲಾ ಮಾಹಿತಿ ಕೇಂದ್ರದಲ್ಲಿ ವಿಷ್ಣು ಭಟ್ ಗೋಡ್ಸೆಯ ನನ್ನ ಪ್ರವಾಸ (1857ರ ಮೊದಲ ಸ್ವಾತಂತ್ರ್ಯ ಸಂಗ್ರಾಮದ ವೀಕ್ಷಕ ಕಥನವನ್ನು) ಲೇಖಕ ಸಾಹಿತಿ ಡಾ। ಜಿ. ಭಾಸ್ಕರ ಮಯ್ಯ ಕುರಿತು ವಿಶೇಷ ಉಪನ್ಯಾಸ ನಿಡಿದರು. ಪ್ರೊ। ಮುರಳೀಧರ ಉಪಾಧ್ಯ ಅಧ್ಯಕ್ಷತೆಯನ್ನು ವಹಿಸಿದ್ದರು. ಡಾ। ಭಾಸ್ಕರ ಮಯ್ಯರೊಂದಿಗೆ ಸಂವಾದ ನಡೆಯಿತು. ಪ್ರೊ। ಸುಬ್ರಹ್ಮಣ್ಯ ಜೋಶಿ ಕಾರ್ಯಕ್ರಮ ನಿರೂಪಿಸಿ ಧನ್ಯವಾದ ನೀಡಿದರು.

**ನುಡಿನಮನ :** ರಂಗನಿರ್ದೇಶಕ ಕೂರಾಡಿ ಸೀತಾರಾಮ ಶೆಟ್ಟಿಯವರಿಗೆ ನಮ್ಮ ಸಂಸ್ಥೆಯ ವತಿಯಿಂದ ಶ್ರದ್ಧಾಂಜಲಿಯನ್ನು ಸಲ್ಲಿಸಲಾಯಿತು. ಪ್ರೊ। ಮುರಳೀಧರ ಉಪಾಧ್ಯ, ಉದ್ಯಾವರ ನಾಗೇಶ್ ಕುಮಾರ್, ಪ್ರೊ। ಮೇಟಿ ಮುದಿಯಪ್ಪ, ಗಾಯಕ ಚಂದ್ರಶೇಖರ ಕೆದ್ಲಾಯ ನುಡಿ ನಮನ ಸಲ್ಲಿಸಿದರು.

**ವಿಚಾರ ಸಂಕಿರಣ :** ಲೋಹಿಯಾ ಜನ್ಮ ಶತಾಬ್ದಿ ಪ್ರತಿಷ್ಠಾನ (ರಿ.) ಶಿವಮೊಗ್ಗ ಮತ್ತು ರಥಬೀದಿ ಗೆಳೆಯರು (ರಿ.) ಉಡುಪಿ ಇವರ ಸಂಯುಕ್ತ ಆಶ್ರಯದಲ್ಲಿ 'ಮಲೆಗಳಲ್ಲಿ ಮದುಮಗಳು' 50 ವಿಚಾರ ಸಂಕಿರಣ ತಾ. 05.01.2019ರ ಶನಿವಾರ ಅಪರಾಹ್ನ 4.00 ಗಂಟೆಗೆ ಧ್ವನ್ಯಾಲೋಕದಲ್ಲಿ ಜರುಗಿತು. ಈ ವಿಚಾರ ಸಂಕಿರಣದ ಉದ್ಘಾಟನೆಯನ್ನು ಹಿರಿಯ ವಿದ್ವಾಂಸರಾದ ಡಾ। ಬಿ. ಎ. ವಿವೇಕ ರೈ ನೆರವೇರಿಸಿದರು. ಪ್ರಾಸ್ತಾವಿಕವಾಗಿ ಶ್ರೀ ಬಿ. ಎಸ್. ನಾಗಭೂಷಣ, ಅಧ್ಯಕ್ಷರು, ಲೋಹಿಯಾ ಜನ್ಮ ಶತಾಬ್ದಿ ಪ್ರತಿಷ್ಠಾನ (ರಿ.) ಶಿವಮೊಗ್ಗ ಮಾತನಾಡಿದರು. ನನ್ನ ಕಣ್ಣಲ್ಲಿ ಮಲೆಗಳಲ್ಲಿ ಮದುಮಗಳು ಎಂಬ ವಿಷಯದಲ್ಲಿ ಶ್ರೀ ಡಿ. ರಾಜಶೇಖರ, ಉಡುಪಿ, ಡಾ। ವಾಸುದೇವ ಬೆಳ್ಳೆ ಮಂಗಳೂರು, ಶ್ರೀ ಲಕ್ಷ್ಮೀಶ ತೋಳ್ಪಾಡಿ ಅಭಿಪ್ರಾಯ ಮಂಡಿಸಿದರು. ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರದ ಸಹಕಾರದೊಂದಿಗೆ ಈ ಕಾರ್ಯಕ್ರಮ ಜರುಗಿತು.

**ದತ್ತಿನಿಧಿ ಉಪನ್ಯಾಸ :** ದಿ। ಪಾ. ವೆಂ. ಆಚಾರ್ಯ ಜನ್ಮ ಶತಮಾನೋತ್ಸವ 2015 ಸಮಿತಿಯಿಂದ ರೂ. 1,10,000/– ಮೂಲಧನವನ್ನು ರಥಬೀದಿ ಗೆಳೆಯರು (ರಿ.) ಉಡುಪಿ ಇವರಿಗೆ ನೀಡಿ ಅದರ ಬಡ್ಡಿಯಿಂದ ದಿ। ಪಾ. ವೆಂ. ಆಚಾರ್ಯರ ನೆನಪಿನಲ್ಲಿ ಕಾರ್ಯಕ್ರಮವನ್ನು ಆಯೋಜಿಸಲು ತಿಳಿಸಲಾಯಿತು.

**ಮುರಾರಿ – ಕೆದ್ಲಾಯ ರಂಗೋತ್ಸವ :** ನಮ್ಮ ಸಂಸ್ಥೆಯ ಆಶ್ರಯದಲ್ಲಿ ಡಾ। ನಿ. ಮುರಾರಿ ಬಲ್ಲಾಳ, ಪ್ರೊ। ಕೆ. ಎಸ್. ಕೆದ್ಲಾಯ ನೆನಪಿನ ಮುರಾರಿ–ಕೆದ್ಲಾಯ ರಂಗೋತ್ಸವವು ಏಪ್ರಿಲ್ 06–07, 2019ರಂದು ಎಂಜಿಎಂ ಕಾಲೇಜಿನ ಮುದ್ದಣ ಮಂಟಪದಲ್ಲಿ ಜರುಗಿತು. ಈ ರಂಗೋತ್ಸವದ ಉದ್ಘಾಟನೆಯನ್ನು ಫಾ। ಆಲ್ವಿನ್ ಸೆರಾವೋ, ಪದವು ಕಾಲೇಜು ಮಂಗಳೂರು ನೆರವೇರಿಸಿದರು. ಶ್ರೀ ರಮೇಶ್ ರಾವ್, ಮಾಜಿ ಕೋಶಾಧಿಕಾರಿ, ರಥಬೀದಿ ಗೆಳೆಯರು ಅತಿಥಿಯಾಗಿ ಆಗಮಿಸಿದ್ದರು.

(06–04–2019 : ಯುವಶ್ರೀ ಬೆಂಗಳೂರು ಅಭಿನಯಿಸಿದ ನಾಟಕ ಸಿಂಹಾಚಲಂ ಸಂಪಿಗೆ ನಿ. ಶಂಕರ ಗಣೇಶ; ತಾ. 07.04.2019 : ಲಿಟ್ಲ್ ಅರ್ಥ್ ಸ್ಕೂಲ್ ಆಫ್ ಥಿಯೇಟರ್ ಮಲಪ್ಪುರಂ ಅಭಿನಯಿಸಿದ ಮಲಯಾಳಂ ನಾಟಕ "ಚಿಲ್ಲರ ಸಮರಂ" ನಿ: ಅರುಣಾಲಾಲ್)

ನಾಟಕಕ್ಕೆ ಸಹಕಾರ ನೀಡಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಡಾ। ಎನ್. ಮುರಾರಿ ಬಲ್ಲಾಳ್ ಚಿಂತನ ಫೌಂಡೇಶನ್ (ರಿ.) ಅಂಬಲಪಾಡಿ, ಎಂಜಿಎಂ ಕಾಲೇಜಿಗೆ ಧನ್ಯವಾದಗಳು.

# ರಥಬೀದಿ ಗೆಳೆಯರು (ರಿ.) ಉಡುಪಿ

## 2018–19ನೇ ಸಾಲಿನ ಪದಾಧಿಕಾರಿಗಳು

**ಅಧ್ಯಕ್ಷರು :**

**ಪ್ರೊ। ಮುರಳೀಧರ ಉಪಾಧ್ಯ ಹಿರಿಯಡ್ಕ**

**ಉಪಾಧ್ಯಕ್ಷರು :**

**ಎನ್. ಸಂತೋಷ ಬಲ್ಲಾಳ್, ಉದ್ಯಾವರ ನಾಗೇಶ್ ಕುಮಾರ್**

**ಕಾರ್ಯದರ್ಶಿ :**

**ಪ್ರೊ। ಸುಬ್ರಹ್ಮಣ್ಯ ಜೋಶಿ**

**ಜೊತೆ ಕಾರ್ಯದರ್ಶಿಗಳು :**

**ಪ್ರಭಾಕರ ಜಿ. ಪಿ, ಎನ್. ಭಾಸ್ಕರ ಸುವರ್ಣ**

**ಕೋಶಾಧಿಕಾರಿಗಳು :**

**ವೇದವ್ಯಾಸ ಭಟ್**

**ನಾಟಕ ತಂಡದ ಸಂಚಾಲಕರು :**

**ಸಂತೋಷ ಶೆಟ್ಟಿ ಹಿರಿಯಡ್ಕ, ಸಂತೋಷ್ ನಾಯಕ್ ಪಟ್ಲ**

**ಕಾರ್ಯಕಾರಿ ಸಮಿತಿ ಸದಸ್ಯರು :**

**ಡಾ। ಯು. ಸಿ. ನಿರಂಜನ್, ಪ್ರೊ। ಮೇಟಿ ಮುದಿಯಪ್ಪ,**
**ಬಾಲಗಂಗಾಧರ ರಾವ್, ಡಾ। ರಾಘವೇಂದ್ರ ರಾವ್, ಉಮೇಶ್ ಶೆಟ್ಟಿ ಹೇರೂರು, ದೀಪಕ್ ಜೈನ್**

**ವಿಶೇಷ ಆಮಂತ್ರಿತರು :**

**ಶ್ರೀಮತಿ ವೈದೇಹಿ, ಜಿ. ರಾಜಶೇಖರ್,**
**ಪ್ರೊ। ಕೆ. ಫಣಿರಾಜ್, ರಾಜು ಮಣಿಪಾಲ**

## ಬಣ್ಣದ ಹೆಜ್ಜೆ ರಂಗ ತರಬೇತಿ ನಿರ್ದೇಶಕರ ಕಾರ್ಯಾಗಾರ
## ರಂಗ ನಿರ್ದೇಶಕರು ಸರ್ವಾಧಿಕಾರಿಗಳಾಗಬಾರದು

ಉಡುಪಿ ಎ.9: ರಂಗಪ್ರದರ್ಶನದ ನಿರ್ದೇಶಕರು ಸರ್ವಾಧಿಕಾರಿಗಳಂತೆ ವರ್ತಿಸದೆ ಪ್ರಜಾಪ್ರಭುತ್ವದ ನೆಲೆಯಲ್ಲಿ ರಂಗ ಪ್ರದರ್ಶನ ಕಟ್ಟುವ ಕಟ್ಟಾಳುಗಳಾಗಬೇಕು. ಇದರ ಕೇಂದ್ರ ನಿರ್ದೇಶಕ ಪ್ರದರ್ಶನ ನಿಯಂತ್ರಿಸುವವನೂ ಆಗಿದ್ದಾನೆ ಎಂದು ತೆಂಕನಿಡಿಯೂರು ಕಾಲೇಜಿನ ಸ್ನಾತಕೋತ್ತರ ಕೇಂದ್ರದ ಆಂಗ್ಲ ಭಾಷಾ ಮುಖ್ಯಸ್ಥ, ರಂಗಕರ್ಮಿ ಪ್ರೋ। ಎಂ. ಪ್ರಸಾದ್ ರಾವ್ ಅಭಿಪ್ರಾಯ ಪಟ್ಟರು.

ರಥಬೀದಿ ಗೆಳೆಯರು ಉಡುಪಿ, ಸಂಗಮ ಕಲಾವಿದೆರ್ ಮಣಿಪಾಲ ಸಂಸ್ಥೆಗಳು ಆಯೋಜಿಸುವ ಬಣ್ಣದ ಹೆಜ್ಜೆ ರಂಗ ತರಬೇತಿ ನಿರ್ದೇಶಕರ ಕಾರ್ಯಗಾರ ಸೃಜನ ಕೌಶಲ ಉದ್ಘಾಟಿಸಿ ಅವರು ಮತನಾಡಿದರು.

ರಥಬೀದಿ ಗೆಳೆಯರು ಅಧ್ಯಕ್ಷ ಪ್ರೊ। ಮುರಳೀಧರ ಉಪಾಧ್ಯ ಹಿರಿಯಡಕ ಅಧ್ಯಕ್ಷತೆ ವಹಿಸಿದ್ದರು ಬಣ್ಣದ ಹೆಜ್ಜೆ ಮಕ್ಕಳ ರಂಗ ತರಬೇತಿ ಶಿಬಿರದ ಸಂಚಾಲಕ ರಾಜು ಮಣಿಪಾಲ ಉಪಸ್ಥಿತರಿದ್ದರು.

ಸಂಚಾಲಕ ಉದ್ಯಾವರ ನಾಗೇಶ್ ಕುಮಾರ್ ಸ್ವಾಗತಿಸಿ, ನಿರ್ದೇಶಕ ಡಾ। ಶ್ರೀಪಾದ್ ಭಟ್ ಪ್ರಾಸ್ತಾವಿಕವಾಗಿ ಮಾತನಾಡಿದರು, ರಥಬೀದಿ ಗೆಳೆಯರು ಸಂಘಟನೆ ನಾಟಕ ವಿಭಾಗದ ಸಂಚಾಲಕ ಸಂತೋಷ್ ಶೆಟ್ಟಿ ಹಿರಿಯಡಕ ನಿರೂಪಿಸಿ, ಸಂಗಮ ಕಲಾವಿದೆರ್ ಸಂಸ್ಥೆಯ ಅಧ್ಯಕ್ಷ ಲಕ್ಷ್ಮಣ ಪೆರಂಪಳ್ಳಿ ವಂದಿಸಿದರು.

**_ಅಭಿಪ್ರಾಯ ಹೇರದಿರಿ_**

*ನಿರ್ದೇಶಕನ ನಿಯಂತ್ರಣ ಏಕಮುಖವಾಗಿರದೆ ಕೇಂದ್ರದ ಪರಿಧಿಯೊಂದಿಗೆ ಕೊಡುಕೊಳ್ಳುವಿಕೆಯ ಮನೋಭಾವವಿದ್ದರೆ ರಂಗಪ್ರದರ್ಶನದಲ್ಲೊಂದು ಸೃಜನಶೀಲತೆ ಅನಾವರಣವಾಗುತ್ತದೆ. ಆದರೆ ನಿರ್ದೇಶಕ ತಾನೇ ಎನ್ನುವ ಅಹಂನಿಂದ ತನ್ನ ಅಭಿಪ್ರಾಯಗಳನ್ನು ನಟರ ಮೇಲೆ ಹೇರಿದರೆ ಅದೊಂದು ಯಾಂತ್ರಿಕ ರಂಗ ಪ್ರಯೋಗವಾಗುತ್ತದೆ. ಇಂತಹ ಪ್ರಯೋಗಗಳಿಂದ ಸಮಾಜ ಏನನ್ನೂ ನಿರೀಕ್ಷಿಸುವುದಿಲ್ಲ. ನಿರ್ದೇಶಕ ತನ್ನ ಜವಾಬ್ದಾರಿ ಎಲ್ಲರಿಗೂ ಹಂಚಿ ತನ್ನ ಜವಾಬ್ದಾರಿಯನ್ನೂ ಹೆಚ್ಚಿಸಿಕೊಳ್ಳಬೇಕು. ಆಗ ಮಾತ್ರ ಆತ ರಂಗಭೂಮಿಯಲ್ಲಿ ಓರ್ವ ಯಶಸ್ವಿ ನಿರ್ದೇಶಕನಾಗುತ್ತಾನೆ.*

*–ಪ್ರೋ। ಎಂ. ಪ್ರಸಾದ್‌ರಾವ್, ರಂಗಕರ್ಮಿ*

ಉದಯವಾಣಿ 10–4–2018

## ಬಣ್ಣದ ಹೆಜ್ಜೆ ರಂಗ ತರಬೇತಿ ಶಿಬಿರ ಉದ್ಘಾಟನೆ
## ಮಕ್ಕಳ ದೈಹಿಕ ಮಾನಸಿಕ ಬೆಳವಣಿಗೆಗೆ ರಂಗ ತರಬೇತಿ ಶಿಬಿರ ಪೂರಕ

ಉಡುಪಿ, ಎ.13: ಮಕ್ಕಳು ದೈಹಿಕವಾಗಿ ಮತ್ತು ಮಾನಸಿಕವಾಗಿ ಹೆಚ್ಚು ಚಟುವಟಿಕೆಯಿಂದ ಇರುವುದನ್ನು ರಂಗ ತರಬೇತಿ ಶಿಬಿರಗಳು ಕಲಿಸಿಕೊಡುತ್ತವೆ ಎಂದು ಲೇಖಕ ರಾಜಾರಾಮ್ ತಲ್ಲೂರು ಅಭಿಪ್ರಾಯಪಟ್ಟರು.

ಮಣಿಪಾಲ ಪ.ಪೂ. ಕಾಲೇಜಿನಲ್ಲಿ ರಥಬೀದಿ ಗೆಳೆಯರು ಉಡುಪಿ ಮತ್ತು ಸಂಗಮ ಕಲಾವಿದೆರ್ ಮಣಿಪಾಲ ಆಶ್ರಯದಲ್ಲಿ ಆಯೋಜಿಸಲಾಗಿರುವ ಬಣ್ಣದ ಹೆಜ್ಜೆ ಮಕ್ಕಳ ರಂಗ ತರಬೇತಿ ಶಿಬಿರವನ್ನು ಎ.13ರಂದು ಉದ್ಘಾಟಿಸಿ ಅವರು ಮತನಾಡಿದರು. ಮಿಲಿಟರಿಯ ಶಿಸ್ತನ್ನೇ ಮಕ್ಕಳ ಮೇಲೆ ಹೇರಲಾಗುತ್ತಿದೆ. ಹಾಗಾಗಿ ಮಕ್ಕಳಲ್ಲಿ ಸಂವೇದನಾಶೀಲತೆ ಕಡಿಮೆಯಾಗಿ ಅವರು ಕಠಿನ ಮನಸ್ಸಿನವರಾಗುತ್ತಿದ್ದಾರೆ. ಮಕ್ಕಳಲ್ಲಿ ದೈಹಿಕ ಚಟುವಟಿಕೆಗಳು ಕೂಡ ಕಡಿಮೆಯಾಗುತ್ತಿದೆ. ರಂಗ ತರಬೇತಿ ಶಿಬಿರಗಳು ಮಕ್ಕಳ ಹಿಂಜರಿಕೆ ದೂರ ಮಾಡುತ್ತವೆ. ಉತ್ತಮ ಮಾತುಗಾರಿಕೆ. ಸಂವಹನ ಕೌಶಲವನ್ನು ಕಲಿಸಿಕೊಡುತ್ತದೆ. ಆತ್ಮಸ್ಥೈರ್ಯ, ಪರಸ್ಪರ ನಂಬಿಕೆ, ಸಹಬಾಳ್ವೆಯನ್ನು

ಉದಯವಾಣಿ, ಶನಿವಾರ, ಎಪ್ರಿಲ್ 14, 2018

## ರಂಗಭೂಮಿಯಷ್ಟು ಒಳ್ಳೆಯ ಶಾಲೆ ಬೇರೆ ಇಲ್ಲ: ತಲ್ಲೂರು

ಉಡುಪಿ: ರಂಗಭೂಮಿಯಷ್ಟು ಒಳ್ಳೆಯ ಶಾಲೆ ಯಾವುದು ಇಲ್ಲ ತರಬೇತಿ ಪಡೆದ ಮಕ್ಕಳು ಉತ್ತಮ ಸಂಸ್ಕಾರ ಹಾಗೂ ಜೀವನ ಮೌಲ್ಯವನ್ನು ರೂಢಿಸಿಕೊಳ್ಳುತ್ತಾರೆ ಎಂದು ಲೇಖಕ ರಾಜಾರಾಂ ತಲ್ಲೂರು ಹೇಳಿದರು.

ರಥಬೀದಿ ಗೆಳೆಯರು ಹಾಗೂ ಸಂಗಮ ಕಲಾವಿದರ ತಂಡ ಮಣಿಪಾಲ ಅವರ ಸಹಯೋಗದಲ್ಲಿ ಶುಕ್ರವಾರ ಡಾ. ಶ್ರೀಪಾದ ಭಟ್ ನಿರ್ದೇಶನದಲ್ಲಿ ಆಯೋಜಿಸಿದ್ದ ಬಣ್ಣದ ಹೆಜ್ಜೆ ಮಕ್ಕಳ ರಂಗ ತರಬೇತಿ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು ನಾಟಕಗಳು ಮಕ್ಕಳ ದೈಹಿಕ ಮತ್ತು ಮಾನಸಿಕ ವಿಕಸನಕ್ಕೆ ಸಹಾಯಕವಾಗಿದೆ ಇಂದಿನ ಒತ್ತಡದ ಶೈಕ್ಷಣಿಕ ದಿನಚರಿಯ ನಡುವೆ ಬಹುತೇಕ ಮಕ್ಕಳ ಮನಸ್ಸು, ಬಾಲ್ಯ ಸಹಜವಾಗಿ ಅರಳುವ ಬದಲು ಬಾಡಿ ಹೋಗುವುದೇ ಹೆಚ್ಚು. ಅಂಕಗಳಿಕೆಯೊಂದನ್ನೇ ಮಾನ ದಂಡವಾಗಿರಿಸಿಕೊಂಡಿದ್ದಾರೆ. ಅವರ ಜೀವನಕ್ಕೆ ಅಗತ್ಯವಾದ ಸೌಂದರ್ಯ ವಾತಾವರಣವನ್ನು ತಂದುಕೊಡುವಲ್ಲಿ ಮನೆ ಹಾಗೂ ಶಿಕ್ಷಣ ಸಂಸ್ಥೆ ಸೋತು ಹೋಗಿರುವುದು ವಿಷಾದ ವ್ಯಕ್ತಪಡಿಸಿದರು.

ಮಗು ಕಲಿಯುವುದು ಅನುಕರಣೆ ಮೂಲಕ. ಅಭಿನಯ ಮಗುವಿನ ಪ್ರತಿಭೆಯನ್ನು ತಾರ್ಕಿಕ ಅಂತ್ಯಕ್ಕೆ ಒಯ್ಯುತ್ತದೆ. ವಿಭಿನ್ನ ಚಟುವಟಿಕೆಗಳ ಮೂಲಕ ಮಕ್ಕಳನ್ನು ಕ್ರಿಯಾಶೀಲರನ್ನಾಗಿಸುವುದಷ್ಟೇ ಅಲ್ಲ, ಅವರ ಮಾನಸಿಕ ಬೆಳವಣಿಗೆಯಲ್ಲೂ ಪ್ರಧಾನಪಾತ್ರ ವಹಿಸಿ, ಸೃಜನಶೀಲತೆಯನ್ನು ಹೆಚ್ಚಿಸುತ್ತದೆ ಎಂದರು.

ಶಿಬಿರದಲ್ಲಿ 160 ವಿದ್ಯಾರ್ಥಿಗಳು ಭಾಗವಹಿಸಿ ರಂಗ ತರಬೇತಿಯನ್ನು ಪಡೆದರು, ರಥಬೀದಿ ಗೆಳೆಯರು ಕಾರ್ಯದರ್ಶಿ ಸುಬ್ರಹ್ಮಣ್ಯ ಜೋಶಿ, ಶ್ರೀಪತಿ ಪೆರಂಪಳ್ಳಿ ನಿರ್ದೇಶಕ ಡಾ. ಶ್ರೀಪತಿ ಭಟ್ ಉಪಸ್ಥಿತರಿದ್ದರು. ನಾಗೇಶ್ ಕುಮಾರ್ ಉದ್ಯಾವರ ಸ್ವಾಗತಿಸಿದರು.

**_ಮುಖ್ಯಾಂಶಗಳು_**

*ರಂಗ ಚಟುವಟಿಕೆ ಮಕ್ಕಳ ಮಾನಸಿಕ ಹಾಗೂ ದೈಹಿಕ ವಿಕಸನಕ್ಕೆ ಸಹಾಯಕ*

*ಮಗುವಿನ ಅಪಾರ ಪ್ರತಿಭಾಶಕ್ತಿ ಪ್ರಚ್ಛನ್ನವಾಗಿ ರೂಪಿಸಲು ಉತ್ತಮ ವೇದಿಕೆಯಾಗಿದೆ.*

*ಅಭಿನಯ ಮಕ್ಕಳ ಪ್ರತಿಭೆಯನ್ನು ತಾರ್ಕಿಕ ಅಂತ್ಯಕ್ಕೆ ಒಯ್ಯುತ್ತದೆ.*

*ಪ್ರಜಾವಾಣಿ, ಕರಾವಳಿ, ಎಪ್ರಿಲ್ 14, 2018*

## ಸಂವಾದ ಎಂಜಿಎಂನಲ್ಲಿ ಕಾವ್ಯ, ನಾಟಕ, ಪ್ರತ್ಯಾಭಿಜ್ಞಾನ ಕುರಿತು ಉಪನ್ಯಾಸ
## ಕಾವ್ಯದ ಉತ್ತಮ ರೂಪವೇ ನಾಟಕ: ರಘುನಂದನ್
### ಕನ್ನಡಪ್ರಭ ವಾರ್ತೆ ಉಡುಪಿ

ಓದುಗನ ಮನಸ್ಸಿಗೆ ಮುದ ನೀಡುವ ಕಾವ್ಯದ ಉತ್ತಮ ರೂಪವೇ ನಾಟಕ ಎಂದು ರಾಷ್ಟ್ರೀಯ ನಾಟಕ ಶಾಲೆಯ ಪದವೀಧರ, ಹಿರಿಯ ರಂಗಕರ್ಮಿ ರಘುನಂದನ್ ಅಭಿಪ್ರಾಯ ವ್ಯಕ್ತಪಡಿಸಿದರು

ಅವರು ಶನಿವಾರ ಗೋವಿಂದ ಪೈ ಸಂಶೋಧನ ಕೇಂದ್ರ ಹಾಗೂ ರಥಬೀದಿ ಗೆಳೆಯರು ಆಯೋಜನೆಯಲ್ಲಿ ಎಂ.ಜಿ.ಎಂ. ಕಾಲೇಜಿನ ಪ್ರಾದೇಶಿಕ ರಂಗಕಲೆಗಳ ಅಧ್ಯಯನ ಕೇಂದ್ರದ ಧ್ವನ್ಯಾಲೋಕದಲ್ಲಿ ನಡೆದ ಕಾವ್ಯ ನಾಟಕ ಪ್ರತ್ಯಾಭಿಜ್ಞಾನ ಎಂಬ ಕುರಿತು ಉಪನ್ಯಾಸ ನೀಡಿದರು.

ಕೇವಲ ಓದುವುದಕ್ಕಾಗಿ ರಚಿತವಾಗಿರುವ ಕಾವ್ಯವನ್ನು ರಂಗದ ಮೇಲೆ ಪ್ರದರ್ಶಿಸುವುದು ಸರಿಯಲ್ಲ. ಕಾವ್ಯವೊಂದು ಕಥನಗುಣ ಮತ್ತು ನಾಟಕೀಯ ಗುಣ ಹೊಂದಿದ್ದಲ್ಲಿ ಮಾತ್ರ ರಂಗದ ಮೇಲೆ ಪ್ರಸ್ತುತಪಡಿಸಬಹುದು. ಇಲ್ಲವಾದಲ್ಲಿ ಅಪಕಲ್ಪನೆ, ತಪ್ಪುಗ್ರಹಿಕೆ ಮತ್ತು ಅಜ್ಞಾನಗಳಿಗೆ ಕಾರಣವಾಗುತ್ತದೆ. ಎಂದು ಅವರು ಎಚ್ಚರಿಸಿದರು. ಈಚಿನ ದಿನಗಳಲ್ಲಿ ಎಲ್ಲಾ ಕಾವ್ಯಗಳನ್ನು ರಂಗದ ಮೇಲೆ ಪ್ರದರ್ಶಿಸುತ್ತಿರುವುದನ್ನು ರಂಗವಿಕಾರ ಎಂದೇ ಪರಿಗಣಿಸಬೇಕಾಗುತ್ತದೆ ಎಂದು ವಿಷಾದಿಸಿದರು.

ನಾಟಕವೂ ಸಾಹಿತ್ಯದ ಒಂದು ರೂಪ ಎಂದು ವಿಶ್ಲೇಷಿಸಿದ ರಘುನಂದನ್, ಮಾತಿನ ಮೂಲಕ ಸಂವಹನ ಮಾಡಬಲ್ಲ ಕಾವ್ಯದ ಪರಿಣಾಮಕಾರಿ ಅಭಿವ್ಯಕ್ತಿ ಉತ್ತಮ ರಂಗನಟನಿಂದ ಮಾತ್ರ ಸಾಧ್ಯ ಎಂದರು.

ರಥಬೀದಿ ಗೆಳೆಯರು ಅಧ್ಯಕ್ಷ ಪ್ರೊ. ಮುರಳೀಧರ ಉಪಾಧ್ಯ ಅಧ್ಯಕ್ಷತೆ ವಹಿಸಿದ್ದರು. ಗೋವಿಂದ ಪೈ ಸಂಶೋಧನ ಕೇಂದ್ರ ನಿರ್ದೇಶಕ ಪ್ರೊ. ವರದೇಶ ಹಿರೇಗಂಗೆ ಸ್ವಾಗತಿಸಿದರು. ಉಡುಪಿ ಚಿತ್ರ ಸಮಾಜ ಸಂಚಾಲಕ ಪ್ರೋ. ಫಣಿರಾಜ್ ನಿರೂಪಿಸಿದರು ಬಳಿಕ ಸಂವಾದ ನಡೆಯಿತು.

ಕನ್ನಡಪ್ರಭ 10–6–2018

## ಅಡಿಗರ ಕಾವ್ಯ, ಕವನ ಮಹಾಕಾವ್ಯಗಳೇ ಆಗಿವೆ
## ಎಂಜಿಎಂನಲ್ಲಿ ಗೋಪಾಲಕೃಷ್ಣ ಅಡಿಗರ ಜನ್ಮ ಶತಮಾನೋತ್ಸವ ಆಚರಣೆಯಲ್ಲಿ ಡಾ. ಅರವಿಂದ ಮಾಲಗತ್ತಿ

ನವ್ಯ ಕವಿಗಳಿಗೆ ಕಲಶಪ್ರಾಯದಂತೆ ಅಡಿಗರ ಕಾವ್ಯ, ಕವನಗಳಿವೆ. ಕುವೆಂಪು ಅವರಿಗಿಂತಲೂ ಅಡಿಗರ ಕಾವ್ಯಗಳು ಹೆಚ್ಚು ಮಹತ್ವದಾಗಿದ್ದು ಆಧುನಿಕ ಕಾವ್ಯಗಳಿಗೆ ದೊಡ್ಡ ಶಕ್ತಿ ತುಂಬಿವೆ ಎಂದು ರಾಜ್ಯ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ. ಅರವಿಂದ ಮಾಲಗತ್ತಿ ಹೇಳಿದರು.

ಕರ್ನಾಟಕ ಸಾಹಿತ್ಯ ಅಕಾಡೆಮಿ ಮತ್ತು ಉಡುಪಿ ರಥಬೀದಿ ಗೆಳೆಯರು ಸಂಘಟನೆ ಸಹಯೋಗದಲ್ಲಿ ಎಂಜಿಎಂ ಕಾಲೇಜಿನ ನೂತನ ರವೀಂದ್ರ ಮಂಟದಲ್ಲಿ ಭಾನುವಾರ ನಡೆದ ಗೋಪಾಲಕೃಷ್ಣ ಅಡಿಗರ ಜನ್ಮ ಶತಮಾನೋತ್ಸವ ಕಾರ್ಯಕ್ರಮದಲ್ಲಿ ಮತನಾಡಿದರು.

ಮಹಾಕಾವ್ಯ ಬರೆದವರು ಮಾತ್ರ ಮಹಾಕವಿಗಳಾಗಬೇಕಿಲ್ಲ ಎಂದ ಅವರು, ಮಹಾ ಕಾವ್ಯಕ್ಕೆ ಬೇಕಾದ ಅಂತಃಸತ್ವ ಬಿಡಿತನ ಮತ್ತು ಇಡಿತನದಲ್ಲಿ ಸಿಗುವಂತಿದ್ದರೆ ಅದನ್ನು ಮಹಾಕಾವ್ಯ ಎನ್ನಲಡ್ಡಿಯಿಲ್ಲ, ಹೀಗಾಗಿ ಅಡಿಗರ ಕಾವ್ಯ, ಕವನಗಳು ಮಹಾಕಾವ್ಯಗಳೇ ಆಗಿವೆ. ಅವರು ಕನ್ನಡದ ಮಹಾಕವಿಯಾಗಿದ್ದಾರೆ ಎಂದು ವಿಶ್ಲೇಷಿಸಿದರು.

ಬೆಂಗಳೂರಿನ ಅಡಿಗ ಟ್ರಸ್ಟ್‌ನ ಜಯರಾಮ ಅಡಿಗ ಮಾತನಾಡಿ, ಗೋಪಾಲಕೃಷ್ಣ ಅಡಿಗರ ಜೀವನ ಚರಿತ್ರೆ ಸಮಗ್ರವಾಗಿ ಪ್ರಕಟವಾಗಿಲ್ಲ. ಅವರ ಮನೆಯಲ್ಲಿ ಡೈರಿ, ಪತ್ರಗಳು, ಲೇಖನಗಳ ಸಹಿತ ಅನೇಕ ದಾಖಲೆ ಲಭ್ಯವಾಗಿವೆ. ಹೈಸ್ಕೂಲ್ ವಿದ್ಯಾರ್ಥಿಯಾಗಿದ್ದಾಗ ರಜಾ ಕಾಲದಲ್ಲಿ ಬರೆದ ಡೈರಿ ಸಿಕ್ಕಿದ್ದು ಅದರಲ್ಲಿ ಕುತೂಹಲಕಾರಿ ವಿಷಯಗಳಿವೆ. ಸಮಗ್ರ ಜೀವನ ಚರಿತ್ರೆ ಬರೆಯುವಷ್ಟು ದಾಖಲೆಗಳಿವೆ. ಅದನ್ನು ಪ್ರಕಟಿಸಲು ಇದು ಸಕಾಲ. ಅಡಿಗರಿಗೆ ಮತ್ತು ಅವರ ಸಮಕಾಲೀನ ಕೆ.ಎಸ್.ನ., ಬೇಂದ್ರೆ, ಕುವೆಂಪು ಅವರ ನಡುವೆ ಕಾವ್ಯ ಸಂಘರ್ಷವಿರಲಿಲ್ಲ ಅವೆಲ್ಲವೂ ಅಪಪ್ರಚಾರ ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ಹಿರಿಯ ಸಾಹಿತಿ ಜಿ.ರಾಜಶೇಖರ್ ಮಾತನಾಡಿ, ಯಾವ ಬಗೆಯ ಕಸುಬುಗಾರಿಕೆ, ಕಾವ್ಯದ ಮಾತನ್ನು ನಿಜಗೊಳಿಸುತ್ತದೆ. ಎಂಬ ಶೋಧನೆಯಲ್ಲಿ ಅಡಿಗರು ತಮ್ಮನ್ನು ನಿರಂತರ ತೊಡಗಿಸಿದ್ದರು. ತನ್ನ ಕಾವ್ಯ ತನ್ನ ಅನುಭವದ ಅಭಿವ್ಯಕ್ತಿಯಾಗಬೇಕೇ ಹೊರತು ಸರ್ವೇಸಾಮಾನ್ಯವಾದ ಮಾತುಗಳ ಲಯಬದ್ಧ ಹೆಣಿಗೆ ಆಗಬಾರದು ಎಂದು ಹಠತೊಟ್ಟುವರಾಗಿದ್ದರು ಎಂದರು. ರಾಜ್ಯ ಸಾಹಿತ್ಯ ಅಕಾಡೆಮಿ ಸದಸ್ಯ ಸಂಚಾಲಕಿ ಮುಮ್ತಾಜ್ ಬೇಗಂ, ರಥಬೀದಿ ಗೆಳೆಯರು ಸಂಸ್ಥೆ ಅಧ್ಯಕ್ಷ ಪ್ರೊ.ಮುರಳೀಧರ ಉಪಾಧ್ಯ ಹಿರಿಯಡ್ಕ ಉಪಸ್ಥಿತರಿದ್ದರು. ಅಕಾಡೆಮಿಯ ರಿಜಿಸ್ಟ್ರಾರ್ ಕರಿಯಪ್ಪ ಎನ್. ಪ್ರಾಸ್ತಾವಿಕ ನುಡಿಗಳನ್ನಾಡಿದರು. ರಥಬೀದಿ ಗೆಳೆಯರು ಸಂಘಟನೆಯ ಪ್ರಧಾನ ಕಾರ್ಯದರ್ಶಿ ಸುಬ್ರಹ್ಮಣ್ಯ ಜೋಶಿ ನಿರೂಪಿಸಿದರು

ವಿಜಯ ಕರ್ನಾಟಕ 2–7–2018

## 'ರಥಬೀದಿ ಗೆಳೆಯರು' ಗೋಪಾಲಕೃಷ್ಣ ಅಡಿಗರ ಜನ್ಮಶತಮಾನೋತ್ಸವ
## ಔಪಚಾರಿಕ ಮಾತು, ಸೋಗಲಾಡಿತನದ ಸೌಜನ್ಯ ದೂರವಿಟ್ಟವರು ಅಡಿಗರು

ಉಡುಪಿ ಜು. 1: ಔಪಚಾರಿಕವಾದ ಮಾತು, ಸೋಗಲಾಡಿತನದ ಸೌಜನ್ಯ ಮೊದಲಾದವುಗಳನ್ನು ತನ್ನ ಕಾವ್ಯದ ಹತ್ತಿರ ಸುಳಿಯದಂತೆ ಎಚ್ಚರ ವಹಿಸಿದವರು ಗೋಪಾಲಕೃಷ್ಣ ಅಡಿಗರು. ಯಾವ ಬಗೆಯ ಕಸುಬುದಾರಿಕೆ ಕಾವ್ಯದ ಮಾತನ್ನು ನಿಜಗೊಳಿಸುತ್ತದೆ ಎನ್ನುವ ಶೋಧನೆಯಲ್ಲಿ ನಿರಂತರ ತೊಡಗಿಸಿಕೊಂಡಿದ್ದರು. ತನ್ನ ಅನುಭವವು ಓದುಗನಿಗೆ ಅಹುದಹುದು ಅನ್ನಿಸುವಂತೆ ವೇದ್ಯಗೊಳಿಸುವುದು ಹೇಗೆಂಬ ಬಗ್ಗೆ ಸದಾ ಯೋಚಿಸಿದವರು ಅಡಿಗರು ಎಂದು ಹಿರಿಯ ಸಾಹಿತಿ ಜಿ. ರಾಜಶೇಖರ ಅಭಿಪ್ರಾಯಪಟ್ಟರು.

ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು, ರಥಬೀದಿ ಗೆಳೆಯರು ಉಡುಪಿ ಇದರ ಆಶ್ರಯದಲ್ಲಿ ಎಂಜಿಎಂ ಕಾಲೇಜಿನ ರವೀಂದ್ರ ಮಂಟಪದಲ್ಲಿ ರವಿವಾರ ನಡೆದ ಗೋಪಾಲಕೃಷ್ಣ ಅಡಿಗರ ಜನ್ಮಶತಮಾನೋತ್ಸವವನ್ನು ಅವರು ಉದ್ಘಾಟಿಸಿ ಮಾತನಾಡಿದರು.

ಕಾವ್ಯ ತನ್ನ ಅನುಭವದ ಅಭಿವ್ಯಕ್ತಿಯಾಗಬೇಕೆ ಹೊರತು ಸರ್ವೆ ಸಾಮಾನ್ಯವಾದ ಮಾತುಗಳ ಲಯಬದ್ಧ ಹೆಣಿಗೆ ಆಗಕೂಡದೆಂದು ಹಠ ತೊಟ್ಟವರು ಅಡಿಗರು. ಅಡಿಗರು ಒಂದು ಜನಾಂಗದ ಕಣ್ಣು ತೆರೆಸಿದ ಕವಿ ಎಂದು ಲಂಕೇಶ್ ಹೇಳಿದ್ದರು. 1969ರಲ್ಲಿ ಪ್ರಕಟವಾದ ಉಡುಪಿಯ ಆದ್ಯಗುರು ಆನಂದತೀರ್ಥರು ಮತ್ತು ಅವರು ಪ್ರವರ್ತಿಸಿದ ಮಠಗಳ ಪರಂಪರೆ, ಜೀವನ ವೃತ್ತಾಂತಗಳನ್ನು ಬೆರಗಿನಲ್ಲಿ ಅಡಿಗರು ಬಣ್ಣಿಸಿದ್ದಾರೆ. ಹೀಗೆ ಎಲ್ಲ ಕ್ಷೇತ್ರಗಳ ವಿಚಾರಧಾರೆಗಳನ್ನು ಇಟ್ಟುಕೊಂಡು ಕಾವ್ಯದ ಮೂಲಕ

ಜನರನ್ನು ಎಚ್ಚರಿಸುವ ಕಾರ್ಯ ಮಾಡಿದ ಓರ್ವ ಹೆಮ್ಮೆಯ ಕವಿ ಅಡಿಗರು ಎಂದರು.

ಬೆಂಗಳೂರು ಅಡಿಗ ಟ್ರಸ್ಟ್‌ನ ಜಯರಾಮ ಅಡಿಗ ಮಾತನಾಡಿ, ಅಡಿಗರ ಜೀವನ ಚರಿತ್ರೆ ಬರೆಯುವುದಕ್ಕೆ ಬೇಕಾದ ಸಾಕಷ್ಟು ಅಂಶಗಳು ಪ್ರಸ್ತುತ ಲಭ್ಯವಿದೆ. ಅಡಿಗರು ಪ್ರೌಢಶಾಲೆಗೆ ತೆರಳುತ್ತಿರುವ ಕಾಲದಿಂದಲೂ ಬರೆದ ದಿನಚರಿ ದೊರಕಿದ್ದು ಅದರಲ್ಲಿ ಕುತೂಲಹಕಾರಿ ಸನ್ನಿವೇಶಗಳಲ್ಲದೆ, ಅವರ ಬಗ್ಗೆ ಇದುವರೆಗೆ ತಿಳಿಯದ ಹಲವಾರು ವಿಚಾರಧಾರೆಗಳನ್ನು ಅವರೇ ಬರೆದಿದ್ದರು ಎಂದರು.

ಅಧ್ಯಕ್ಷತೆ ವಹಿಸಿದ್ದ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ| ಅರವಿಂದ ಮಾಲಗತ್ತಿ ಮಾತನಾಡಿ, ಅಡಿಗರು ಕನ್ನಡದ ಓರ್ವ ಧೀಮಂತ ಕವಿ ಆದುದರಿಂದ ಅವರ ಶತಮಾನೋತ್ಸವ ಕಾರ್ಯಕ್ರಮವನ್ನು ನಾಡಿನಾದ್ಯಂತ ಹಮ್ಮಿಕೊಳ್ಳಲಾಗಿದೆ. ಅಡಿಗರ ಬಗ್ಗೆ ಇನ್ನಷ್ಟು ವಿಚಾರ ಸಂಕಿರಣ ನಡೆದರೂ ಅವರಿಗೆ ನಾವು ಕೊಡುವ ಗೌರವ ಕಡಿಮೆಯೇ ಆಗುತ್ತದೆ. ಎಲ್ಲ ಕವಿಗಳಿಗೂ ಕಲಶಪ್ರಾಯವಾದ ಕವಿತೆಗಳನ್ನು ಬರೆದಿದ್ದ ಅವರನ್ನು ಮಹಾಕವಿಯೆಂದು ಕರೆಯಬಹುದು ಎಂದರು.

ಅಕಾಡೆಮಿ ಸದಸ್ಯ ಸಂಚಾಲಕಿ ಮುಮ್ತಾಜ್ ಬೇಗಂ, ರಥಬೀದಿ ಗೆಳೆಯರು ಸಂಸ್ಥೆಯ ಅಧ್ಯಕ್ಷ ಮುರಳೀಧರ ಉಪಾಧ್ಯ ಹಿರಿಯಡಕ ಉಪಸ್ಥಿತರಿದ್ದರು. ಅಕಾಡೆಮಿ ರಿಜಿಸ್ಟ್ರಾರ್ ಕರಿಯಪ್ಪ ಎನ್. ಸ್ವಾಗತಿಸಿದರು. ರಥಬೀದಿ ಗೆಳೆಯರು ಸಂಸ್ಥೆಯ ಕಾರ್ಯದರ್ಶಿ ಸುಬ್ರಹ್ಮಣ್ಯ ಜೋಷಿ ನಿರೂಪಿಸಿ, ವಂದಿಸಿದರು

ಭಾವಗೀತಕ್ಕಷ್ಟೇ ಹೊಸಗನ್ನಡ, ರುದ್ರಕ್ಕೆ ಗಂಭೀರಕ್ಕೆ ಸುದೀರ್ಘಕ್ಕೆ ಹಳಗನ್ನಡ ಸೊನ್ನೆ ವ್ಯಂಜನದ ರುಚಿ ಹತ್ತಿತೇಕೆ ಅರ್ಥ ಗೌರವವಿರದ ವಾಗಾಡಂಬರಕ್ಕೆ ಬೂಟಾಟಿಕೆಗೆ ನಾಂದಿ ಹಾಕಿದ್ದೇಕೆ ಹೇಳಿ, ಗುರುವೇ' ಎಂದು ಬಿಎಂಶ್ರೀ ಅವರ ವ್ಯಕ್ತಿತ್ವದ ದ್ವಂದ್ವ, ವಿರೋಧಾಭಾಸಗಳನ್ನು ಅಡಿಗರು ಹೀಗೆ ಬರೆದಿದ್ದರೆಂದು ಹಿರಿಯ ಸಾಹಿತಿ ಜಿ. ರಾಜಶೇಖರ್ ನೆನಪಿಸಿಕೊಂಡರು.

## ಅಡಿಗರು ಬದುಕು, ಸಾಹಿತ್ಯದ ಬಗ್ಗೆ ಹೊಸ ಎಚ್ಚರ ಮೂಡಿಸಿದ ಕವಿ ಗೋಪಾಲಕೃಷ್ಣ ಅಡಿಗ ಜನ್ಮ ಶತಮಾನೋತ್ಸವದಲ್ಲಿ ರಾಜಶೇಖರ್

ಗೋಪಾಲಕೃಷ್ಣ ಅಡಿಗರು ಕನ್ನಡದ ಖ್ಯಾತ ಸಾಹಿತಿ ಪಿ. ಲಂಕೇಶ್ ಹೇಳಿದಂತೆ 'ಒಂದು ಜನಾಂಗದ ಕಣ್ಣು ತೆರೆಸಿದ ಕವಿ' ಬದುಕು ಮತ್ತು ಸಾಹಿತ್ಯದ ಕುರಿತಂತೆ ನಮ್ಮಲ್ಲಿ ಒಂದು ಹೊಸ ಎಚ್ಚರ ಮೂಡಿಸಿದವರು ಎಂದು ಕನ್ನಡದ ಖ್ಯಾತ ವಿಮರ್ಶಕ, ಚಿಂತಕ ಜಿ. ರಾಜಶೇಖರ್ ಅಭಿಪ್ರಾಯ ಪಟ್ಟಿದ್ದಾರೆ. ಉಡುಪಿಯ ರಥಬೀದಿ ಗೆಳೆಯರು, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸಹಯೋಗದೊಂದಿಗೆ ಎಂಜಿಎಂ ಕಾಲೇಜಿನ ನೂತನ ರವೀಂದ್ರ ಮಂಟಪದಲ್ಲಿ ರವಿವಾರ ಹಮ್ಮಿಕೊಂಡ 'ಗೋಪಾಲಕೃಷ್ಣ ಅಡಿಗರ ಜನ್ಮ ಶತಮಾನೋತ್ಸವ' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ನಂತರದ ದಿನಗಳಲ್ಲಿ ಲಂಕೇಶ್ ಅವರು ಅಡಿಗರ ವಿರುದ್ಧ ತಿರುಗಿ ಬಿದ್ದ ಸಾಕ್ಷಿಯಾದರೂ, ಕಟು ಟೀಕಾಕಾರರಾದರೂ, ಕವಿಯ ಬಗ್ಗೆ ಲಂಕೇಶ್ ಉತ್ಸಾಹದಲ್ಲಿ ಆಡಿದ ಮಾತು ಎಂದೂ ಸುಳ್ಳಾಗುವುದಿಲ್ಲ. ನಿಜಕ್ಕೂ ಅಡಿಗರು ಒಂದು ಜನಾಂಗದ ಕಣ್ಣು ತೆರೆಸಿದ ಕವಿಯಾಗಿದ್ದಾರೆ ಎಂದರು.

1968ರಿಂದ 1971ರವರೆಗೆ ಉಡುಪಿಯ ಪೂಣಪ್ರಜ್ಞ ಕಾಲೇಜಿನ ಪ್ರಾಂಶುಪಾಲರಾಗಿದ್ದ ಅಡಿಗರು, ಉಡುಪಿಗೆ ಸಂಬಂಧಿಸಿದಂತೆ ಬರೆದ ಎರಡು ಪ್ರಸಿದ್ಧ ಕವನಗಳಾದ 'ಆನಂದತೀರ್ಥರಿಗೆ' ಹಾಗೂ 'ಶ್ರೀರಾಮ ನವಮಿಯ ದಿವಸ'ವನ್ನು ಸುದೀರ್ಘವಾಗಿ ವಿಶ್ಲೇಷಿಸಿದ ರಾಜಶೇಖರ್, ಅಡಿಗರ ಅನೇಕ ನಿಲುವುಗಳ ಕುರಿತು ನನಗೆ ಭಿನ್ನಮತವಿದೆ ಎಂದರು.

ಆನಂದತೀರ್ಥ ಕವನದಲ್ಲಿ ಉಡುಪಿಯ ಆದ್ಯಗುರು ಆನಂದತೀರ್ಥರು (ಮಧ್ವಾಚಾರ್ಯರು) ಹಾಗೂ ಅವರು ಪ್ರವರ್ತಿಸಿದ ಮಠಗಳ ಪರಂಪರೆ, ಅದರ ಜೀವನ ವೃತ್ತಾಂತವನ್ನು ಬೆರಗಿನಲ್ಲಿ ಬಣ್ಣಿಸುವ ಅಡಿಗರು, ಈಗ ಆನಂದತೀರ್ಥರ ಗಾಢಶ್ರದ್ಧೆ ಮಾಲಿನ್ಯ ವ್ಯವಸ್ಥೆಯಾಗಿದೆ. ಉಜ್ವಲವಾಗಿ ಬೆಳಗಿದ ಪರಂಪರೆಯೊಂದು ಕ್ರಮೇಣ ಅವನತಿ ಹಾದಿ ಹಿಡಿದಿದೆ. ಅವರು ಸ್ಥಾಪಿಸಿದ ಮಠ ಕುಸಿಯುತ್ತಿದೆ. ಅದನ್ನು ಉಳಿಸಲು ಹುಟ್ಟಿ ಬರುವಂತೆ ಆರ್ತರಾಗಿ ಮೊರೆ ಇಡುತ್ತಾರೆ ಎಂದರು.

ಅಡಿಗರು 1969ರಲ್ಲಿ ರಚಿಸಿದ ಈ ಕವಿತೆಯನ್ನು 2018ರಲ್ಲಿ ಓದುವಾಗ ಉಡುಪಿಯ ಅವನತಿ ಅಡಿಗರು ಚಿತ್ರಿಸಿದ್ದಕ್ಕಿಂತ ಹೆಚ್ಚು ವಿಷಮವಾಗಿದೆ. ಅಡಿಗರು ಕವನದಲ್ಲಿ ನಿರೂಪಿಸಿದ ಕ್ಷೇತ್ರದ ಸೋಗಲಾಡಿತನ ಹಾಗೂ ಕರ್ಮಠ ಆಚರಣೆ ಉಳಿದ ಧಾರ್ಮಿಕ ಕ್ಷೇತ್ರಗಳಲ್ಲಿ ಕಂಡುಬಂದರೂ, ಉಡುಪಿಯ ಧಾರ್ಮಿಕತೆ ಎದುರಿಸುತ್ತಿರುವ ಬಿಕ್ಕಟ್ಟು ನಮ್ಮ ಕಾಲದ ಪ್ರಭುತ್ವ ಕೇಂದ್ರಿತ ರಾಜಕೀಯದ ಕೊಡುಗೆ ಎಂದು ವಿಶ್ಲೇಷಿಸಿದರು.

'ಶ್ರೀರಾಮನವಮಿಯ ದಿವಸ' ಕವಿತೆಯಲ್ಲಿ ಅಡಿಗರು ಚಿತ್ರಿಸುವ ರಾಮ ಈಗಾಗಲೇ ಪರಿಪೂರ್ಣನಾಗಿರುವ ದೇವತೆಯೂ ಅಲ್ಲ. ಸಿದ್ಧವಾಗಿರುವ ದೇವರ ಪ್ರತಿಮೆಯೂ ಅಲ್ಲ. ಅಡಿಗರ ರಾಮ, ವ್ರತ, ತಪಸ್ಸು, ಕಾಯುವಿಕೆ, ನೋಂಪು ಮತ್ತು ಧ್ಯಾನಗಳಿಂದ ಸಾಕ್ಷಾತ್ಕರಿಸಿಕೊಳ್ಳಬೇಕಾದವ. ಆದರೆ ಅಡಿಗರು ಬೆಂಬಲಿಸಿದ ರಾಮಜನ್ಮ ಭೂಮಿ ಚಳುವಳಿ ಅಡಿಗರ ಕವಿತೆ ಎತ್ತಿ ಹಿಡಿಯುವ ರಾಮಾಯಣ ಪರಂಪರೆಯನ್ನೇ ಬುಡಬೇರು ಸಹಿತ ಕಿತ್ತೆಸಿದಿದೆ ಎಂದರು.

ಉಡುಪಿಯಲ್ಲಿ ಪ್ರಾಂಶುಪಾಲರಾಗಿರುವಾಲೇ ಅಂದಿನ ಜನಸಂಘದಿಂದ ಲೋಕಸಭಾ ಚುನಾವಣೆಗೆ ಬೆಂಗಳೂರಿನಿಂದ ಸ್ಪರ್ಧಿಸಿದ್ದ ಅಡಿಗರಿಗೆ ಇದಕ್ಕೆ ಮೊದಲಾಗಲೀ, ಅನಂತರವಾಗಲೀ ಜನಸಂಘ / ಬಿಜೆಪಿಗಳ ಹಿಂದುತ್ವ ರಾಜಕೀಯಕ್ಕೂ ಹೇಳಿಕೊಳ್ಳುವ ನಿಕಟ ಸಂಬಂಧವಿರಲಿಲ್ಲ. ಅವರ ಕವಿತೆಗಳಲ್ಲಿ ಹೆಚ್ಚಿನವು ಧಾರ್ಮಿಕತೆಯ ಹಠ, ಜಡತ್ವ ಮತ್ತು ಕರ್ಮಠಗಳನ್ನು ಹೀಗೆಳೆಯುವಂತಹವು ಎಂದರು.

ಆದರೂ ಅಡಿಗರು ಹಿಂದುತ್ವದ ಪ್ರತಿಪಾದಕರಿಗೆ ಪ್ರಿಯವಾಗಬಹುದಾದ ಎರಡು ಕವಿತೆಗಳನ್ನು–ಮತ್ತೆ ಮೊಳಗಲಿ ಇಲ್ಲಿ ಪಾಂಚಜನ್ಯ ಹಾಗೂ ಅಂಬೇಡಕರ ಭೀಮರಾಯರಿಗೆ– ಬರೆದಿರುವುದನ್ನು ಗುರುತಿಸಿದ್ದೇನೆ. ಇದರಲ್ಲಿ ಅಂಬೇಡಕರ ಕವನದುದ್ದಕ್ಕೂ ಅಡಿಗರು ಆಧಾರವೇ ಇಲ್ಲದ ಅಭಿಪ್ರಾಯಗಳು, ಏಕಪಕ್ಷೀಯ ಘೋಷಣೆ ಹಾಗೂ ಸುಳ್ಳೇ ಮುಖಸ್ತುತಿಯ ಮಾತುಗಳಿವೆ ಎಂದರು.

ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಡಾ. ಅರವಿಂದ ಮಾಲಗತ್ತಿ ಉದ್ಘಾಟನಾ ಉದ್ಘಾಟನಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಬೆಂಗಳೂರು ಅಡಿಗ ಟ್ರಸ್ಟ್‌ನ ಜಯರಾಮ ಅಡಿಗ ಮುಖ್ಯ ಅತಿಥಿಯಾಗಿದ್ದರು. ಅಕಾಡಮಿಯ ಸದಸ್ಯ ಸಂಚಾಲಕಿ ಮುಮ್ತಾಝ್ ಬೇಗಂ, ರಥಬೀದಿ ಗೆಳೆಯರು ಅಧ್ಯಕ್ಷ ಪ್ರೊ. ಮುರಳಿಧರ ಯಪಾಧ್ಯ ಉಪಸ್ಥಿತರಿದ್ದರು.

ಅಕಾಡಮಿ ರಿಜಿಸ್ಟ್ರಾರ್ ಕರಿಯಪ್ಪ ಎನ್. ಅತಿಥಿಗಳನ್ನು ಸ್ವಾಗತಿಸಿದರು. ಪ್ರೊ. ಸುಬ್ರಹ್ಮಣ್ಯ ಜೋಶಿ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

ನಮ್ಮ ಕಾಲದ ರಾಜಕೀಯದ ದಿಕ್ಕುದೆಸೆಗಳನ್ನು

ಬದಲಾಯಿಸಿದ ಬಿಜೆಪಿ ನಾಯಕತ್ವದ ರಾಮಜನ್ಮ ಚಳವಳಿಗೆ ಉಡುಪಿಯ ಕೊಡುಗೆ ನಿರ್ಣಾಯಕವಾದುದು. ಈ ಚಳವಳಿಯಿಂದ ದೇಶದುದ್ದಕ್ಕೂ ಹಿಂದೆಂದೂ ಕಾಣದಷ್ಟೂ ವ್ಯಾಪಕವಾಗಿ ಹಬ್ಬಿದ ಕೋಮುದ್ವೇಷ ಹಾಗೂ ಹಿಂಸೆ ಆಸ್ತಿಕರು ಮತ್ತು ನಾಸ್ತಿಕರನ್ನು ಕಾಡಬೇಕು. ಉಡುಪಿಯ ಮಠಗಳಿಗೆ ಯಾಕೆ ಈ ನೈತಿಕ ಸಮಸ್ಯೆ ಬಾಧಿಸುವುದಿಲ್ಲ? ಅಥವಾ ಅದು ಪ್ರತಿಪಾದಿಸುವ ಹೊಸ ಧಾರ್ಮಿಕತೆಯಲ್ಲಿ ಅಂದರೆ ಆನಂದತೀರ್ಥರ ಶ್ರದ್ಧೆಗಿಂತ ಭಿನ್ನವಾದ ಧಾರ್ಮಿಕತೆಯಲ್ಲೇ ಈ ಹಿಂಸೆ ಮತ್ತು ಸಂವೇದನ ಶೂನ್ಯತೆ ಅಂತರ್ಗತವಾಗಿದೆಯೇ? ಜಿ. ರಾಜಶೇಖರ್

ವಾರ್ತಾಭಾರತಿ, ಜುಲೈ 2, 2018

## ಇಂದಿನ ಕಾಲಘಟ್ಟದಲ್ಲಿ ಮತ್ತೆ ನೆನಪಾಗುತ್ತಾರೆ ಗಾಂಧಿ 'ಗಾಂಧೀಜಿ' ಚಿಂತನೆಯ ಪ್ರಸ್ತುತತೆ – ಸಂವಾದ ಕಾರ್ಯಕ್ರಮದಲ್ಲಿ ಸಾಹಿತಿ ವೈದೇಹಿ

ಪ್ರಜಾವಾಣಿ ವಾರ್ತೆ 05–09–18

'ನಾನು ಮಾಡಿದ್ದೇ ಸರಿ, ನನ್ನನ್ನು ಒಪ್ಪಿಕೊಂಡವರು ಮಾತ್ರ ಭೂಮಿ ಮೇಲೆ ಉಳಿಯಲಿ; ವಿರೋಧಿಸುವವರು ಇರಲೇಬಾರದು ಎಂಬ ಕಾಲಘಟ್ಟದಲ್ಲಿ ಗಾಂಧೀಜಿ ಮತ್ತೆ ಮತ್ತೆ ನೆನಪಾಗುತ್ತಾರೆ' ಎಂದು ಸಾಹಿತಿ ವೈದೇಹಿ ಹೇಳಿದರು.

ರಥಬೀದಿ ಗೆಳೆಯರು ಸಂಘಟನೆ ಎಂಜಿಎಂ ಕಾಲೇಜಿನ ನೂತನ ರವೀಂದ್ರ ಮಂಟಪದಲ್ಲಿ ಮಂಗಳವಾರ ಆಯೋಜಿಸಿದ್ದ 'ಗಾಂಧೀಜಿ' ಚಿಂತನೆಯ ಪ್ರಸ್ತುತತೆ–ಒಂದು ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಪ್ರಸ್ತುತ ಎಲ್ಲರ ದುಃಖ ನಮ್ಮದಾಗುತ್ತಿಲ್ಲ. ಸ್ವಾರ್ಥ ಮನೋಭಾವ ಹೆಚ್ಚಾಗಿದೆ. ಆದರೆ, ಗಾಂಧೀಜಿ ಮಾತ್ರೆಲ್ಲರ ದುಃಖವನ್ನು ತಮ್ಮಲ್ಲಿ ಕಾಣುತ್ತಿದ್ದರು. ಹಾಗಾಗಿ ಮಹಾತ್ಮ ಎಲ್ಲ ಕಾಲಕ್ಕೂ ಪ್ರಸ್ತುತವಾಗುತ್ತಿದ್ದಾರೆ ಎಂದರು.

'ಅಂಬೇಡ್ಕರ್ ಹಾಗೂ ಗಾಂಧೀಜಿ ಅವರನ್ನು ನಾವು ಗ್ರಹಿಸುತ್ತಿರುವ ರೀತಿಯೇ ಬೇರೆಯಾಗಿದೆ. ಅವರಿಬ್ಬರೂ ಎಂದೂ ಶತ್ರುಗಳಂತೆ, ದಾಯಾದಿಗಳಂತೆ ಜಗಳವಾಡಲಿಲ್ಲ. ಸೈದ್ಧಾಂತಿಕವಾಗಿ ಚರ್ಚಿಸುತ್ತಿದ್ದರು. ಜಗಳ ಮಾಡಿಕೊಳುತ್ತಿದ್ದರು. ಕೊನೆಗೆ ಪರಸ್ಪರ ಗೌರವದಿಂದ, ಪ್ರೀತಿಯಿಂದ ಒಬ್ಬರನೊಬ್ಬರು ಕಾಣುತ್ತಿದ್ದರು' ಎಂದರು. ಗಾಂಧೀಜಿ ಅವರದ್ದು ತಾಯಿ ಮನಸ್ಸು. ಅವರಿಗೆ ಹೆಂಗರಳು ಇದ್ದಿದ್ದರಿಂದಲೇ ಅವರ ಕಣ್ಣಿಗೆ ಎಲ್ಲರೂ ಮನುಷ್ಯರಂತೆ ಕಾಣುತ್ತಿದ್ದರು. ದಲಿತರ ಉದ್ಧಾರದ ಬಗ್ಗೆ ಗಾಂಧೀಜಿ ಅವರಿಗಿದ್ದ ಕಾಳಜಿ ಯಾರಲ್ಲೂ ಕಾಣಲು ಸಾಧ್ಯವಿಲ್ಲ ಎಂದರು.

ಪ್ರಸ್ತುತ ಕೆಲವರು ಅಂಬೇಡ್ಕರ್ ಹಾಗೂ ಗಾಂಧೀಜಿ ಅವರನ್ನು ತಪ್ಪಾಗಿ ಅರ್ಥೈಸಿಕೊಂಡು ಸೀಳು ಸೀಳುಗಳಾಗಿ ನೋಡುತ್ತಾ ಸಮಾಜವನ್ನು ಸೀಳುವಂತಹ ಕೆಲಸವನ್ನು ಮಾಡುತ್ತಿದ್ದಾರೆ. ಇಬ್ಬರ ಬಗೆಗಿನ ಗ್ರಹಿಕೆ ಬದಲಾಗಬೇಕಿದೆ ಎಂದು ವೈದೇಹಿ ಕಿವಿಮಾತು ಹೇಳಿದರು.

'ದಲಿತರು, ಮಹಿಳೆಯರ ಮೇಲಿನ ದೌರ್ಜನ್ಯ ಇಂದು ಭಯ ಹುಟ್ಟಿಸುವಂತಿದೆ. ನಮ್ಮೊಳಗಿನ ಚಾರಿತ್ರ್ಯ, ಸ್ವಚ್ಛವಿಲ್ಲದಿರುವುದೇ ಇಂತಹ ಅನಾಹುತಗಳಿಗೆ ಕಾರಣ. ಅಂತರಂಗ ಸ್ವಚ್ಛವಾಗದ ಹೊರತು ಸಮಾಜವನ್ನು ಬದಲಾವಣೆ ಮಾಡಲು ಸಾಧ್ಯವಿಲ್ಲ ಎಂದು ಗಾಂಧೀಜಿ ಬಲವಾಗಿ ನಂಬಿದ್ದರು. ನಾವೂ ಅವರಂತೆ ಬದುಕಬೇಕಿದೆ.' ಎಂದರು.

ಚಿಂತಕ ಫಣಿರಾಜ್ ಮಾತನಾಡಿ 'ಗಾಂಧೀಜಿ ವ್ಯಕ್ತಿತ್ವವನ್ನು ರೂಪಿಸಿಕೊಂಡಿದ್ದು, ಸಾಮಾಜಿಕ, ರಾಜಕೀಯ ಬದುಕನ್ನು ರೂಪಿಸಿಕೊಂಡಿದ್ದು, ವಸಾಹತು ಶಾಹಿ ವಿರೋಧಿ ಹೋರಾಟದ ಕಾಲದಲ್ಲಿ. ಪರಕೀಯರ ಆಳ್ವಿಕೆಯಿಂದ ದಾಸ್ಯ ಮುಕ್ತಿ ಸಿಕ್ಕರೆ ಸಾಲುವುದಿಲ್ಲ. ಸ್ವಾತಂತ್ರ್ಯ ಸಿಕ್ಕ ಬಳಿಕ ಜನರ ಪ್ರಭುತ್ವ ಕೂಡಾ ದಾಸ್ಯದಿಂದ ಮುಕ್ತರಾಗಬಹುದು ಎಂದು ಬಲವಾಗಿ ನಂಬಿದ್ದರು. ಗಾಂಧೀಜಿ ಕಾಲಘಟ್ಟಕ್ಕೆ ಅನುಗುಣವಾಗಿ ಭಿನ್ನ ಅಭಿಪ್ರಾಯಗಳನ್ನು ನೀಡಿದ್ದಾರೆ. ಕೆಲವರು ಅವರ ಹೇಳಿಕೆಯನ್ನೇ ಮುಂದಿಟ್ಟುಕೊಂಡು ತೇಜೋವಧೆ ಮಾಡುತ್ತಿದ್ದಾರೆ ಎಂದರು. ಪೂನಾ ಒಪ್ಪಂದ ಗಾಂಧೀಜಿ ಹಾಗೂ ಅಂಬೇಡ್ಕರ್ ಮಧ್ಯೆ ನಡೆದ ಸೈದ್ಧಾಂತಿಕ ಸಂಘರ್ಷವನ್ನು ಭಿನ್ನವಾಗಿ ಅರ್ಥೈಸಲಾಗುತ್ತಿದೆ. ಸಮಾಜ ಪರಿವರ್ತನೆಯಾಗದಿದ್ದರೆ, ಸಹೋದರತ್ವದ ಸಮಾಜ ನಿರ್ಮಾಣವಾಗದಿದ್ದರೆ, ಭಾರತದಲ್ಲಿ ಜಾತಿ ಪದ್ಧತಿಯನ್ನು ನಿರ್ಮೂಲನೆ ಮಾಡಲು ಸಾಧ್ಯವಿಲ್ಲ ಎಂದು ಗಾಂಧೀಜಿ ನಂಬಿದ್ದರು.

ವೇದಿಕೆ ಕಾರ್ಯಕ್ರಮದ ಬಳಿಕ ಬೊಳುವಾರು ಮಹಮ್ಮದ್ ಕುಂಞಿ ಅವರ 'ಪಾಪು ಗಾಂಧಿ, ಗಾಂಧಿ ಬಾಪು ಆದ ಕಥೆ' ಆಧರಿಸಿದ ನಾಟಕ ಪ್ರದರ್ಶನ ನಡೆಯಿತು.

ಜಾಲತಾಣಗಳಲ್ಲಿ ಮಾತ್ರ ಗುರುತು–ವಿಷಾದ

ಪ್ರಸ್ತುತ ಯುವ ಜನತೆ ಗಾಂಧೀಜಿ ಅವರನ್ನು ಸಾರ್ವಜನಿಕ ಸ್ಥಳದಲ್ಲಿರುವ ಪ್ರತಿಮೆಗಳಲ್ಲಿ, ಜೇಬಿನಲ್ಲಿರುವ ಗರಿಗರಿ ನೋಟಿನಲ್ಲಿ, ಸಾಮಾಜಿಕ ಜಾಲತಾಣದಲ್ಲಿ ಮಾತ್ರ ಗುರುತಿಸುತ್ತಿದೆ. ಅವರ ಆದರ್ಶ ತತ್ವಗಳು ಯುವಜನರನ್ನು ತಲುಪುತ್ತಿಲ್ಲ ಎಂದು ಕಾರ್ಯಕ್ರಮ ಸಂಯೋಜಕ ವಿನೀತ್‌ರಾಜ್ ಅಸಮಾಧಾನ ವ್ಯಕ್ತಪಡಿಸಿದರು.

ಸಮಕ್ಷೆ ಪ್ರಕಾರ ಸಾಮಾಜಿಕ ಜಾಲತಾಣಗಳಲ್ಲಿ ಗಾಂಧೀಜಿ ಅವರ ಕುರಿತು ಪ್ರಕಟವಾಗುವ 10 ಬರಹಗಳಲ್ಲಿ 7 ನಿಂದನಾತ್ಮಕವಾಗಿರುತ್ತದೆ. ಯುವ ಜನತೆಗೆ ಗಾಂಧೀಜಿ ರೋಲ್ ಮಾಡೆಲ್ ಆಗಿಲ್ಲ ಎಂದರು.

–ಪ್ರಜಾವಾಣಿ 5–9–2018

## ಗಾಂಧೀಜಿಯವರದು ಹೆಂಗರುಳು: ವೈದೇಹಿ

ಉಡುಪಿ, ಸೆ. 4 : ಗಾಂಧೀಜಿಯಲ್ಲಿದ್ದುದು ಹೆಂಗರುಳು. ಹಾಗಾಗಿಯೇ ಅವರು ಎಲ್ಲರ ಬಗ್ಗೆಯೂ ಚಿಂತಿಸುತ್ತಾ ಒಳಿತನ್ನು ಬಯಸುತ್ತಿದ್ದರು ಎಂದು ಸಾಹಿತಿ ವೈದೇಹಿ ಅಭಿಪ್ರಾಯಪಟ್ಟರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಧಾರವಾಡದ ರಂಗಾಯಣ ಸಹಯೋಗದಲ್ಲಿ ರಥಬೀದಿ ಗೆಳೆಯರು ಹಾಗೂ ಎಂಜಿಎಂ ಗಾಂಧಿ ಅಧ್ಯಯನ ಕೇಂದ್ರದ ಆಶ್ರಯದಲ್ಲಿ ಮಂಗಳವಾರ ಉಡುಪಿ ಎಂಜಿಎಂ ಕಾಲೇಜಿನ ನೂತನ ರವೀಂದ್ರ ಮಂಟಪದಲ್ಲಿ ಜರಗಿದ 'ಪಾಪು ಗಾಂಧಿ ಗಾಂಧಿ ಪಾಪು ಆದ ಕತೆ' ಆಧರಿಸಿದ ರಂಗ ರೂಪಕದ ಪೂರ್ವದಲ್ಲಿ ನಡೆದ 'ಗಾಂಧೀಜಿ ಚಿಂತನೆಯ ಪ್ರಸ್ತುತತೆ–ಒಂದು ಸಂವಾದ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಗಾಂಧೀಜಿಯವರ ಮಾತು, ಭಾವನೆಯಲ್ಲಿ ಹೆಣ್ತನವಿತ್ತು. ಹಾಗಾಗಿ ಅವರಿಗೆ ಎಲ್ಲರೂ ಮನುಷ್ಯರಾಗಿ ಕಾಣುತ್ತಿದ್ದರು.

ದಲಿತರು, ಮಹಿಳೆಯರ ಬಗ್ಗೆ ಗಾಂಧೀಜಿಯವರಷ್ಟು ಯಾರೂ ಚಿಂತನೆ ಮಾಡಿಲ್ಲ. ವಿರೋಧಿಗಳು ಇರಬಾರದು ಎನ್ನುವ ಯುಗದಲ್ಲಿ ನಾವಿದ್ದೇವೆ. ಇಂತಹ ಸಂದರ್ಭದಲ್ಲಿ ಗಾಂಧಿ ನೆನಪಾಗುತ್ತಾರೆ ಎಂದು ಅಭಿಪ್ರಾಯಪಟ್ಟರು.

ಪ್ರೀತಿಯ ಜಗಳ

ಅಂಬೇಡ್ಕರ್ ಮತ್ತು ಗಾಂಧಿ ಶತ್ರುಗಳಾಗಿಯಲ್ಲ. ಗೆಳೆಯರಾಗಿ ಜಗಳವಾಡುತ್ತಿದ್ದರು. ಅದು ಗೌರವ, ಪ್ರೀತಿಯಿಂದ ಕೊನೆಗೊಳ್ಳುತ್ತಿತ್ತು. ಆದರೆ ನಾವು ಅವರಿಬ್ಬರ ನಡುವೆ ಭಿನ್ನತೆ ಸೃಷ್ಟಿಸಿದ್ದೇವೆ ಎಂದು ವೈದೇಹಿ ಹೇಳಿದರು.

### 'ಗಾಂಧೀಜಿ ಚಿಂತನೆ ಪ್ರಸ್ತುತತೆ' ಸಂವಾದ

ಗಾಂಧಿ ಅಧ್ಯಯನ ಕೇಂದ್ರದ ಸಂಯೋಜಕ ವಿನೀತ್‌ರಾಜ್ ಮಾತನಾಡಿ, ವ್ಯವಧಾನ ಮತ್ತು ಮುಕ್ತ ಮನಸ್ಸಿನಿಂದ ಮಾತ್ರ ಗಾಂಧೀಜಿಯನ್ನು ಅರ್ಥ ಮಾಡಿಕೊಳ್ಳಲು ಸಾಧ್ಯ. ಗಾಂಧೀಜಿಯನ್ನು ವೈಭವೀಕರಿಸದೆ ಸ್ವೀಕರಿಸಬೇಕು. ಆಗ ಅವರ ಪ್ರಸ್ತುತತೆ ಅನುಭವಕ್ಕೆ ನಿಲುಕುತ್ತದೆ ಎಂದರು.

ಚಿಂತಕ ಫಣಿರಾಜ್ ಮಾತನಾಡಿ, ಮನ ಪರಿವರ್ತನೆಯಿಂದ ಜಾತಿ ವೈಷಮ್ಯ ದೂರವಾಗುತ್ತದೆ ಎಂದು ಗಾಂಧಿ ಪ್ರತಿಪಾದಿಸಿದ್ದರು. ಅಂಬೇಡ್ಕರ್ ಕೂಡಾ ಹಕ್ಕಿನ ಜತೆ ಸಹೋದರತ್ವವೂ ಬೇಕು ಎಂದಿದ್ದರು ಎಂದು ಹೇಳಿದರು.

ರಥಬೀದಿ ಗೆಳೆಯರು ಸಂಘಟನೆಯ ಅಧ್ಯಕ್ಷ ಮುರಳೀಧರ ಉಪಾಧ್ಯ, ಕಾರ್ಯದರ್ಶಿ ಸುಬ್ರಹ್ಮಣ್ಯ ಜೋಷಿ ಉಪಸ್ಥಿತರಿದ್ದರು. ಉಪಾಧ್ಯಕ್ಷ ನಾಗೇಶ್ ಉದ್ಯಾವರ ಸ್ವಾಗತಿಸಿದರು. ಸಂತೋಷ್ ಶೆಟ್ಟಿ ಹಿರಿಯಡಕ ಸ್ವಾಗತಿಸಿದರು.

–ಉದಯವಾಣಿ 5–9–18

### ಗಾಂಧೀಜಿ ಅವರ ಅನುಯಾಯಿಗಳಿಂದಲೇ ಮೆಥಡಾಲಜಿ ಆಗುವಲ್ಲಿ ವಿಫಲವಾಯಿತು.

ಉಡುಪಿ: ಮಾರ್ಕ್ಸ್ ವಾದ ಒಂದು 'ಮೆಥಡಾಲಜಿ ಆಗಿ ಇಂದಿಗೂ ವಿಕಾಸಶೀಲವಾಗಿದೆ. ಆದರೆ, ಗಾಂಧಿವಾದ 'ಅವರ ಅನುಯಾಯಿಗಳಿಂದಲೇ ಒಂದು ಮೆಥಡಾಲಜಿ ಆಗುವಲ್ಲಿ ವಿಫಲವಾಗಿ ನಾಶವಾಗಿ ಹೋಗಿದೆ ಎಂದು ಖ್ಯಾತ ಚಿಂತಕ, ಬರಹಗಾರ ಪ್ರೊ. ಜಿ. ಭಾಸ್ಕರ ಮಯ್ಯ ಹೇಳಿದರು.

ಅವರು ಮಂಗಳವಾರ ಉಡುಪಿಯ ಬಳಕೆದಾರರ ವೇದಿಕೆಯಲ್ಲಿ ಉಡುಪಿ ರಥಬೀದಿ ಗೆಳೆಯರು ಗಾಂಧಿ ಜಯಂತಿ ಪ್ರಯುಕ್ತ ಹಮ್ಮಿಕೊಂಡ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದರು.

ಗಾಂಧೀಜಿಯವರ ಅಭಿವೃದ್ಧಿ ಮಾದರಿಯನ್ನು 'ನಾವು ಅರ್ಥ ಮಾಡಿಕೊಳ್ಳುವಲ್ಲಿ ಸೋಲುವುದು ಖಂಡಿತ. ಏಕೆಂದರೆ ಗಾಂಧಿ ಸತ್ಯ ಮತ್ತು ಅಹಿಂಸೆಯನ್ನು ಮೂಲವಾಗಿಟ್ಟುಕೊಂಡು ಕಾಲ, ದೇಶಕ್ಕನುಸರಿಸಿ ವಿಚಾರ ಮತ್ತು ಕಾರ್ಯಕ್ರಮಗಳನ್ನು ಬದಲಾಯಿಸಿಕೊಳ್ಳುತ್ತಿದ್ದರು. ಮಾರ್ಕ್ಸ್ ವಾದದಂತೆ ಇದು ಕೂಡಾ ಒಂದು ಮೆಥಡಾಲಜಿಯೇ ಆಗಿತ್ತು ಎಂದು ಅವರು ತಿಳಿಸಿದರು.

ಅಧ್ಯಕ್ಷತೆಯನ್ನು ರಥಬೀದಿ ಗೆಳೆಯರು ಸಂಘಟನೆಯ ಅಧ್ಯಕ್ಷ ಪ್ರೊ. ಮುಳೀಧರ ಉಪಾಧ್ಯ ಹಿರಿಯಡಕ ವಹಿಸಿದ್ದರು. ಪ್ರೊ. ಸುಬ್ರಹ್ಮಣ್ಯ ಜೋಶಿ ಉಪಸ್ಥಿತರಿದ್ದರು.

### 1857 ಸಿಪಾಯಿ ದಂಗೆಯಲ್ಲ ಜನಕ್ರಾಂತಿ: ಡಾ। ಭಾಸ್ಕರ ಮಯ್ಯ

ಉಡುಪಿ, ಅ. 4: 1857ರಲ್ಲಿ ನಡೆದ ಘಟನೆಯನ್ನು ಸಿಪಾಯಿ ದಂಗೆ ಎಂದು ಬ್ರಿಟಿಷರು ಕರೆದಿದ್ದರು ಅದನ್ನು ಬ್ರಿಟಿಷರ ವಿರುದ್ಧದ ಜನಕ್ರಾಂತಿ ಎಂದು ಜಗತ್ತಿನ ಅನೇಕ ರಾಷ್ಟ್ರಗಳು ಒಪ್ಪಿದ್ದವು. ಕಾರ್ಲ್ ಮಾರ್ಕ್ಸ್ ಮೊದಲ ಬಾರಿ ನ್ಯೂಯಾರ್ಕ್‌ನ ಡೇಲಿ ಟ್ರಿಬ್ಯೂನ್‌ನಲ್ಲಿ ಲೇಖನದಲ್ಲಿ ಬರೆದಿದ್ದರು. ಏಶ್ಯಾದ ಅನೇಕ ದೇಶಗಳ ಮೇಲೆ ಪರಿಣಾಮ, ತುರ್ಕಿಯ ಮೇಲೆ ಪರಿಣಾಮ ಬೀರಿತ್ತು ಎಂದು ಚಿಂತಕ, ನಿವೃತ್ತ ಪ್ರಾಧ್ಯಾಪಕ ಡಾ। ಗುಂಡ್ಮಿ ಭಾಸ್ಕರ ಮಯ್ಯ ಅಭಿಪ್ರಾಯ ಪಟ್ಟರು.

ರಥಬೀದಿ ಗೆಳೆಯರು ಬಳಕೆದಾರರ ವೇದಿಕೆ ಕಛೇರಿಯಲ್ಲಿ ಗಾಂಧೀ ಜಯಂತಿ ನಿಮಿತ್ತ ಮಂಗಳವಾರ ಆಯೋಜಿಸಿದ್ದ ವಿಷ್ಣು ಭಟ್ಟ ಶಾಸ್ತ್ರಿ ಗೋಡ್ಸೆಯ 'ನನ್ನ ಪ್ರವಾಸ' ಗ್ರಂಥದ ಕುರಿತು ಅದರ ಅನುವಾದಕರಾದ ಭಾಸ್ಕರ ಮಯ್ಯ ಅವರು ಮಾತನಾಡಿ, ಪುಣೆ ವರಸಾಯಿಯಲ್ಲಿ ಜನಿಸಿದ ಒಬ್ಬ ಸಾಮಾನ್ಯ ಪುರೋಹಿತ ವಿಷ್ಣು ಭಟ್ಟ ಗೋಡ್ಸೆ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ನಡೆದ ಘಟನೆಯನ್ನು ಕಣ್ಣಾರೆ ಕಂಡು ದಾಖಲಿಸಿರುವುದು ವಿಶೇಷ ಎಂದರು.

ಬಡತನದಿಂದಾಗಿ ಹಣ ಸಂಪಾದನೆಗೆಂದು ಗ್ವಾಲಿಯರ್‌ಗೆ ತೆರಳಿದ ವಿಷ್ಣು ಭಟ್ಟರಿಗೆ ದಕ್ಕಿದ ಸಂಭಾವನೆಗಳನ್ನು ದಂಗೆಕೋರರು, ಬ್ರಿಟಿಷ್ ಸಿಪಾಯಿಗಳು ದೋಚಿದರು. ಝಾನ್ಸಿ ರಾಣಿ ಲಕ್ಷ್ಮೀಬಾಯಿ ದೈನಂದಿನ ಚಟುವಟಿಕೆಗಳನ್ನು ದಾಖಲಿಸಿದ ವಿಷ್ಣು ಭಟ್ಟರು ಕೊನೆಗೆ ಗಂಗಾಜಲವನ್ನು ಹೊತ್ತುಕೊಂಡು ಬಂದು ಅದರಲ್ಲಿ ತಂದೆ ತಾಯಿಗಳಿಗೆ ಸ್ನಾನ ಮಾಡಿಸಿ ತೃಪ್ತರಾದರು. 'ಗಂಗಾಜಲವನ್ನು ತರುವುದು ಕಷ್ಟವಾದಾಗ ರಾತ್ರಿ ಕನಸಿನಲ್ಲಿ ಒಬ್ಬಳು ಕನ್ಯೆ ಬಂದು ನಾನು ನಿನ್ನ ಹಿಂದಿದ್ದೇನೆಂದು ಹೇಳುತ್ತಾಳೆ. ಮರುದಿನ ತನ್ನ ಅನಾರೋಗ್ಯವೂ ವಾಸಿಯಾಗಿತ್ತು' ಎಂಬುದನ್ನು ದಾಖಲಿಸುತ್ತಾರೆ. ಎಂದು ಡಾ। ಮಯ್ಯ ಹೇಳಿದರು.

1827ರಲ್ಲಿ ಜನಿಸಿದ ಗೋಡ್ಸೆ 1856ರಿಂದ 59ರ ವರೆಗೆ ಸಂಚರಿಸಿ 1883ರಲ್ಲಿ ಅನುಭವ ಕಥನ ಬರೆಯುತ್ತಾರೆ. 1904ರಲ್ಲಿ ನಿಧನರಾದ ಬಳಿಕ 1907ರಲ್ಲಿ ದೋಷಪೂರಿತವಾಗಿ ಮುದ್ರಣ ಆಗುತ್ತದೆ. ಮೂಲಪ್ರತಿಯನ್ನು 1922ರಲ್ಲಿ ಭಾರತೀಯ ಸಂಶೋಧನಾ ಮಂಡಳಿ ಓದಿದರೂ ಸಂಶೋಧಕರು ಸಾಕಷ್ಟು ಲಾಭ ಪಡೆದುಕೊಂಡರೆ ವಿನಾ ಗೋಡ್ಸೆಗೆ ನ್ಯಾಯ ಒದಗಿಸಲಿಲ್ಲ. 1948ರಲ್ಲಿ ಮರಾಠಿ ಪತ್ರಿಕೆ ಸಹ್ಯಾದ್ರಿಯಲ್ಲಿ ತತ್ವವಾಮನ ಪೋತೇದಾರ್ ಮತ್ತು ಎನ್. ಆರ್. ಪಾಠಕ್ ಅವರಿಂದ ಪ್ರಕಟವಾಯಿತು. ಇದನ್ನು ಅನುವಾದಿಸುವಾಗ ನಾನು ರೋಮಾಂಚನವನ್ನು ಅನುಭವಿಸಿದ್ದೇನೆ ಎಂದು ಡಾ। ಮಯ್ಯ ಹೇಳಿದರು. ರಥಬೀದಿ ಗೆಳೆಯರು ಅಧ್ಯಕ್ಷ ಪ್ರೊ। ಮುರಳೀಧರ ಉಪಾಧ್ಯ ಹಿರಿಯಡಕ ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಸುಬ್ರಹ್ಮಣ್ಯ ಜೋಷಿ ಸ್ವಾಗತಿಸಿದರು.

### 1857ರಲ್ಲಿ ಬ್ರಾಹ್ಮಣರ ಪಾತ್ರ

ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ತಾತ್ಯಾಟೋಪೆ, ಮಂಗಲ್ ಪಾಂಡೆ ಅಸಂಖ್ಯಾತ ಸಿಪಾಯಿಗಳು ಬ್ರಾಹ್ಮಣರಾಗಿದ್ದರು. ಆದರೆ ಈಗ ಎಲ್ಲದಕ್ಕೂ ಬ್ರಾಹ್ಮಣರೇ ಕಾರಣವೆಂಬ ದ್ವೇಷ ಜಗಜ್ಜಾಹಿರಾಗಿದೆ. ಕಥಾನಕದಲ್ಲಿ ಬರುವ 'ಕರಿಯರು' ಎಂಬ ಶಬ್ಧ 'ಭಾರತೀಯ'ರನ್ನುದ್ದೇಶಿಸಿ ಇದೆ ವಿನಾ ಈಗಿನಂತೆ ಪರಿಶಿಷ್ಟರು ಎಂಬ ಅರ್ಥದಲ್ಲಲ್ಲ ಎಂದು ಡಾ। ಮಯ್ಯ ಹೇಳಿದರು.

ಗಾಂಧಿಯನ್ನು ಚರಕಕ್ಕೆ ಕಟ್ಟಿ ಹಾಕಿದರು.

ಒಂದನೆಯ ಮಹಾಯುದ್ಧದ ವೇಳೆ ಭಾರತೀಯರನ್ನು ಬ್ರಿಟಿಷ್

ಸೇನೆಗೆ ಸೇರಿಸುವಲ್ಲಿ ಪಾತ್ರ ವಹಿಸಿದ್ದ ಗಾಂಧೀಜಿ ಎರಡನೆಯ ಮಹಾಯುದ್ಧದಲ್ಲಿ ಬ್ರಿಟಿಷರ ವಿರುದ್ಧ 'ಭಾರತ ಬಿಟ್ಟು ತೊಲಗಿ' ಚಳುವಳಿ ನಡೆಸಿದ್ದರು. ಇದು ಒಂದಕ್ಕೊಂದು ವಿರೋಧಾಭಾಸವಲ್ಲ. ವಿಕಾಸದ ಮೆಟ್ಟಿಲು. ತನಗೆ ಸರಿ ಕಂಡದ್ದನ್ನು ಧೈರ್ಯದಿಂದ ಹೇಳಿದವರು ಗಾಂಧಿ. ಮಾರ್ಕ್ಸ್ ವಾದದಂತೆ ಗಾಂಧೀಯಿಸಂನ್ನು ಅವರ ಅನುಯಾಯಿಗಳು ಅರ್ಥ ಮಾಡಿಕೊಳ್ಳುವಲ್ಲಿ ವಿಫಲರಾದರು. ಅನಂತ ಮೂರ್ತಿ, ಆಶೀಶ್ ನಂದಿ, ಪ್ರಸನ್ನ ಅವರು ಗಾಂಧಿಯನ್ನು ಚರಕಕ್ಕೆ ಕಟ್ಟಿ ಹಾಕಿದರು. ಸ್ವಾತಂತ್ರ್ಯ ನಂತರ ಗ್ರಾಮ ಸ್ವರಾಜ್‌ಗಾಗಿ ನೆಹರೂಗೆ ಪತ್ರ ಬರೆದರೂ ಸ್ಪಂದಿಸಲಿಲ್ಲ. 1947ರ ಘಟನೆಯೆಂದರೆ ಬ್ರಿಟಿಷರಿಂದ ಭೂಮಾಲಕರು, ಬಂಡವಾಳಶಾಹಿಗಳಿಗೆ ದೇಶವನ್ನು ಹಸ್ತಾಂತರ ಮಾಡಿದ್ದಕ್ಕೆ ಮುಂದಿನ ಸ್ವಾತಂತ್ರ್ಯ ಜಾರಿಗೊಳಿಸಲು ಭೂ ಮಾಲಕರಿಗೂ, ಕಾಂಗ್ರೆಸ್‌ನವರಿಗೂ ಗಾಂಧೀಜಿ ಬೇಡವಾಗಿದ್ದರು. 1947ರ ಪ್ರಾರ್ಥನಾ ಸಭೆಯಲ್ಲಿ 'ಎಲ್ಲರೂ ಕೈ ಬಿಡಬಹುದು. ದೇವರು ಕೈ ಬಿಡಲಾರ' ಎಂದು ಹೇಳಿದ್ದರು. 120 ವರ್ಷ ಬದುಕುತ್ತೇನೆಂದವರು ಇಂತಹ ಪರಿಸ್ಥಿತಿಗೆ ತಲುಪಿದ್ದರು.–ಡಾ। ಗುಂಡ್ಮಿ ಭಾಸ್ಕರ ಮಯ್ಯ

### ಅಯೋಧ್ಯೆಯಲ್ಲಿ 400–500 ರಾಮ ಮಂದಿರಗಳಿದ್ದವು.

ವಿಷ್ಣು ಭಟ್ಟ ಗೋಡ್ಸೆಯವರು 1857ರ ಅವಧಿಯಲ್ಲಿ ಅಯೋಧ್ಯೆಯಲ್ಲಿ 400–500 ರಾಮಮಂದಿರಗಳಿದ್ದವು. ಹನುಮಾನ್ ಮಂದಿರವಿತ್ತು. 8 ಕೃಷ್ಣ ಮಂದಿರಗಳಿದ್ದವು. ಅಲ್ಲಿನ ಮಂಗಗಳಿಗೆ ಜಿಲೇಬಿ ಅಂದರೆ ಇಷ್ಟ. ರಾಮ ನವಮಿ ದಿನ ಲಕ್ಷಾಂತರ ಜನರು ಸೇರುತ್ತಿದ್ದರು. ಎಂದು ದಾಖಲಿಸಿದ್ದಾರೆ.– ಪ್ರೊ। ಮುರಳೀಧರ ಉಪಾಧ್ಯ ಹಿರಿಯಡಕ

### 'ಮಲೆಗಳಲ್ಲಿ ಮದುಮಗಳು–50' ವಿಚಾರ ಸಂಕಿರಣ

ಬಹು ಆಯಾಮಕ್ಕೆ ಸ್ಥಾನ ಕೊಟ್ಟ ಕಾದಂಬರಿ : ವಿವೇಕ್ ರೈ

ಉಡುಪಿ ಜ. 6 : ಮಲೆನಾಡನ್ನು ವ್ಯಾಪಕವಾದ ಕ್ಯಾನ್ವಾಸ್‌ನಲ್ಲಿ ಮಲೆನಾಡಿನ ಸಕಲ ಜೀವಚರಗಳಿಗೂ, ಎಲ್ಲಾ ಜಾತಿಗಳಿಗೆ ಸಮಾನ ಸ್ಥಾನಮಾನವನ್ನು ಕುವೆಂಪು 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಕಲ್ಪಿಸಿಕೊಟ್ಟಿರುವುದನ್ನು ಕಾಣಬಹುದು. ಈ ಹಿನ್ನೆಲೆಯಲ್ಲಿ ಇದು ಕನ್ನಡದ ಅಪರೂಪ ಹಾಗೂ ಅತಿ ವಿಶಿಷ್ಟವಾದ ಕಾದಂಬರಿ ಎಂದು ನಿವೃತ್ತ ಕುಲಪತಿ, ಡಾ। ಬಿ. ಎ. ವಿವೇಕ್ ರೈ ಹೇಳಿದರು.

ಶಿವಮೊಗ್ಗದ ಲೋಹಿಯಾ ಜನ್ಮ ಶತಾಬ್ದಿ ಪ್ರತಿಷ್ಠಾನ ಹಾಗೂ ಉಡುಪಿಯ ರಥಬೀದಿ ಗೆಳೆಯರು ಇವರ ಜಂಟಿ ಆಶ್ರಯದಲ್ಲಿ ಎಂಜಿಎಂ ಕಾಲೇಜಿನ ಧ್ವನ್ಯಾಲೋಕ ಸಭಾಂಗಣದಲ್ಲಿ ಶನಿವಾರ ಹಮ್ಮಿಕೊಳ್ಳಲಾದ ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು–50' ಕುರಿತ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಅವರು ಮಾತನಾಡಿದರು.

50 ವರ್ಷಗಳ ಹಿಂದೆ ಈ ಕಾದಂಬರಿಗೆ ಡಾ। ಅನಂತಮೂರ್ತಿ ಅವರ 'ಸಂಸ್ಕಾರ' ಡಾ। ಶಾಂತಿನಾಥ ದೇಸಾಯಿ ಅವರ ಕಾದಂಬರಿ, ಗಿರಿಯವರ 'ಗತಿ–ಸ್ಥಿತಿ'ಯಂತಹ ಕಾದಂಬರಿಗೆ ಸಿಕ್ಕಿದಷ್ಟು ವಿಮರ್ಶಕರ ಮನ್ನಣೆ ಪಡೆದಿರಲಿಲ್ಲ ಎಂದು ಬೆಟ್ಟು ಮಾಡಿದರು.

ನಮ್ಮ ಸಮಾಜದ ಜಾತಿಗಳ ಶ್ರೇಣೀಕೃತ ವ್ಯವಸ್ಥೆ ತೆರೆದು ತೋರಿಸುವ ಕಾದಂಬರಿ ಇದಾಗಿದೆ. ಜಾತಿಗಳ ಸಾಂಸ್ಕೃತಿಕ ಸ್ತರಗಳೂ ಇದರಲ್ಲಿ ಸ್ಪಷ್ಟವಾಗಿ ಕಾಣಿಸುತ್ತದೆ. ಜಾತಿ ಇಟ್ಟುಕೊಂಡು ಜಾತಿ ಕರಗುತ್ತಾ ಬರುವ ಸೂಚನೆ ಕಾದಂಬರಿ ನೀಡುತ್ತದೆ. ಇದರೊಂದಿಗೆ ಪ್ರತಿಷ್ಠಿತ ಜಾತಿಗಳು ಪ್ರತಿಷ್ಠೆ ಕಳೆದು ಕೊಳ್ಳುವುದರ ಚಿತ್ರಣವಿದೆ ಎಂದರು. ಕಾದಂಬರಿಯಲ್ಲಿ ಕ್ರೈಸ್ತರ ಬಲಾತ್ಕಾರದ ಮತಾಂತರವನ್ನು ವಿರೀಧಿಸುವ ಕುವೆಂಪು, ಅವರು ಊರಿನಲ್ಲಿ ನಿರ್ಮಿಸುವ ಎಲ್ಲಾ ಜಾತಿಗಳಿಗೂ ಅವಕಾಶವಿರುವ ಶಾಲೆ. ಆಸ್ಪತ್ರೆಗಳ ನಿರ್ಮಾಣದ ಪರವಾಗಿ ಮಾತನಾಡುತ್ತಾರೆ. ಅದೇ ರೀತಿ ಜ್ಯೋತಿಷಿಗಳ ಮೌಢ್ಯ ಪ್ರತಿಪಾದನೆಯನ್ನು ಕಟುವಾಗಿ ವಿರೋಧಿಸುತ್ತಾರೆ. ಇದೇ ಸಂದರ್ಭ ಸ್ವಾಮಿ ವಿವೇಕಾನಂದರ ಚಿಕಾಗೋ ಭಾಷಣವನ್ನು ಉಲ್ಲೇಖಿಸುತ್ತಾರೆ ಎಂದರು.

ವಿಮರ್ಶಕ ಜಿ. ರಾಜಶೇಖರ್, ಮಲೆನಾಡಿನ ಹಳ್ಳಿಗಳ ಸಾಮಾಜಿಕ ಬಿಕ್ಕಟ್ಟು, ಕಟ್ಟುಕಟ್ಟಲೆ, ಮದುವೆ, ಅಡುಗೆ ಎಲ್ಲವೂ ಕಾದಂಬರಿಯಲ್ಲಿದೆ. ಮಲೆನಾಡಿನಲ್ಲಿ ಮನುಷ್ಯ ಮತ್ತು ನಿಸರ್ಗದ ನಡುವಿನ ಸಾಮರಸ್ಯ ಹಾಗೂ ಸಂಘರ್ಷದ ಚಿತ್ರಣವೂ ಕಾಣಿಸಿಕೊಳ್ಳುತ್ತದೆ. ಮಲೆನಾಡು, ಇಲ್ಲಿ ರೂಪಕ, ಪ್ರತಿಮೆ, ಕನಸು ಎಲ್ಲವೂ ಆಗಿದೆ ಎಂದರು. ರಾಮಾಯಣ ದರ್ಶನಂಗಿಂತಲೂ ಮಲೆಗಳಲ್ಲಿ ಮದುಮಗಳು ಕೃತಿ ಶ್ರೇಷ್ಠ ಎಂದು ವಿದ್ವಾಂಸ ಲಕ್ಷ್ಮೀಶ ತೋಳ್ಪಾಡಿ ಅಭಿಪ್ರಾಯಪಟ್ಟರು. ಮಂಗಳೂರಿನ ಡಾ। ವಾಸುದೇವ ಬೆಳ್ಳೆ ವಿಚಾರ ಮಂಡಿಸಿದರು. ಪ್ರತಿಷ್ಠಾನದ ಅಧ್ಯಕ್ಷ ಡಿ. ಎಸ್. ನಾಗಭೂಷಣ ಸ್ವಾಗತಿಸಿ ಪ್ರಸ್ತಾವನೆಗೈದರು. ರಥಬೀದಿ ಗೆಳೆಯರು ಸಂಘಟನೆಯ ಅಧ್ಯಕ್ಷ ಪ್ರೊ। ಮುರಳೀಧರ ಉಪಾಧ್ಯ ಹಿರಿಯಡಕ ವಂದಿಸಿದರು. ಕಾರ್ಯದರ್ಶೀ ಪ್ರೊ। ಸುಬ್ರಹ್ಮಣ್ಯ ಜೋಶಿ ವಂದಿಸಿದರು.

### ಜಾತೀಯತೆ, ಅತ್ಯಾಚಾರ : ಅಂದು ಇಂದು...

ಕುವೆಂಪು ಅವರು 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಶ್ರೇಣೀಕೃತ ಜಾತಿ ವ್ಯವಸ್ಥೆಯ ವಿವಿಧ ಸ್ತರಗಳನ್ನು ವಿವರಿಸುತ್ತಾರೆ. ಜಾತಿ, ವೃತ್ತಿಯನ್ನು ತ್ಯಜಿಸುವ ಪ್ರಕ್ರಿಯೆ ಕಂಡು ಬರುತ್ತದೆ. ಈಗ ಜಾತೀಯತೆ ಬಲವತ್ತರವಾಗಿರುವುದು ಕಂಡುಬರುತ್ತದೆ. ಈಗ ಇದು ಲಾಭದಾಯಕವಾಗಿದ್ದು ಜನರು ಜಾತೀಯತೆಯೊಂದಿಗೆ ಗುರುತಿಸಿಕೊಳ್ಳುತ್ತಿದ್ದಾರೆ. 50 ವರ್ಷಗಳ ಹಿಂದೆ ಇಂದಿನ ಹಾಗೇ ಜಾತಿ ಧರ್ಮಕ್ಕೆ ಅಂಟಿಕೊಂಡಿರಲಿಲ್ಲ. ಗಂಡನಿಂದಲೂ ಅತ್ಯಾಚಾರ ನಡೆಯುತ್ತದೆ ಎನ್ನುವುದನ್ನು ಕುವೆಂಪು ಕಾದಂಬರಿಯಲ್ಲಿ ಬಿಚ್ಚಿಡುತ್ತಾರೆ. ಜಾತಿ ಮತ್ತು ಹೆಣ್ಣಿನ ದೃಷ್ಟಿಯಲ್ಲಿ ಅಂದು ಕಂಡುಕೊಂಡ ದೃಷ್ಟಿ ಇಂದು ಪ್ರಸ್ತುತವಾಗಿದ್ದು ನವೀಕರಿಸಿಕೊಂಡು ನೋಡುವ ಅವಕಾಶವಿದೆ.–ಡಾ। ಬಿ. ವಿವೇಕ್ ರೈ, ನಿವೃತ್ತ ಕುಲಪತಿ

ಉದಯವಾಣಿ 7–1–2019

## ಹೋರಾಟದ ಧ್ವನಿಯಾದ 'ಚಿಲ್ಲರ ಸಮರಮ್'

### ಸಂತೋಷ್ ನಾಯಕ್ ಪಟ್ಲ

ರಂಗಭೂಮಿ ಅಂತಿಮವಾಗಿ ನಟರ ಮಾಧ್ಯಮ. ನಟನೆಯೇ ಅದರ ಶಕ್ತಿ ಮತ್ತು ಜೀವಾಳ. ಉಳಿದೆಲ್ಲ ಸರಕುಗಳು ಅಂದರೆ ಬೆಳಕು, ರಂಗಭೂಮಿ ಪರಿಕರಗಳು ನಟನ ಘನತೆಗೆ ಧಕ್ಕೆ ಬಾರದ ರೀತಿಯಲ್ಲಿ ಹಿತಮಿತವಾಗಿ ಘನತೆಯಿಂದ ಕೂಡಿರಬೇಕು. ನಟರ ನಟನೆ ಶಕ್ತಿಯಿಂದ ನೋಡುಗರಲ್ಲಿ ಭಾವಸ್ಫುರಣೆ ಉಂಟಾಗಿ ಅದರ ಅನುಭೂತಿಯಿಂದ ದಕ್ಕಿದ ರಸಾಸ್ವಾದ ಬಹಳ ದೀರ್ಘಕಾಲ ಗುಂಗುಹ್ ಗುಟ್ಟುತ್ತಿರುತ್ತದೆ. ಆದರೆ ಇತ್ತೀಚೆಗೆ ನಾಟಕೀಕರಣವಾಗಬಲ್ಲ ರಂಗಕ್ರಿಯೆಗಳನ್ನು ಮರೆಸಿಬಿಡುವಂತೆ ಹೊಗೆಭರಿತ ಮಾಯಾ ಬೆಳಕಿನ ವರ್ತುಲಗಳಿಂದ ರಂಗದ ಮೇಲೆ ಅತಿರಂಜಿತ ಲೋಕವನ್ನು ಸೃಷ್ಟಿಸಿ ನಟ ಮತ್ತು ನೋಡುಗನ ನಡುವೆ ಇರಬೇಕಾದ ಭಾವ ಲೋಕವನ್ನು ಭ್ರಮಾಲೋಕವಾಗಿಸಿ ಬಿಡುವ ಅತಿರೇಕದ ರಂಗ

ಪ್ರಯೋಗಗಳನ್ನು ಮಾಡುತ್ತಿದ್ದೇವೆ. ಇದಕ್ಕೆ ಅಪವಾದ ಮತ್ತು ಅಪರೂಪವೆಂಬಂತೆ ಪ್ರಸ್ತುತಗೊಂಡ ನಿಜದ ನಾಟಕ ಚಿಲ್ಲರ ಸಮರಮ್. ಇದು ಇವತ್ತಿನ ರಂಗಭೂಮಿಯ ವ್ಯಾಕರಣದಲ್ಲಿ ನಟನ ಘನತೆ ಮತ್ತು ನಿರ್ದೇಶಕನ ಸೃಜನಶೀಲತೆಗೆ ಸಾಕ್ಷಿಯಾದ ಜನ ಸಾಮಾನ್ಯರ ಹೋರಾಟದ ನಾಟಕ.

ಚಿಲ್ಲರ್ ಸಮರಮ್ ನಾಟಕ ಕೇರಳದ 'ಲಿಟ್ಲ್ ಅರ್ಥ್ ಸ್ಕೂಲ್ ಆಫ್ ಥಿಯೇಟರ್'ನವರು ಪ್ರಸ್ತುತ ಪಡಿಸಿದ ಮಲಯಾಲಂ ನಾಟಕ. ಮುರಾರಿ-ಕೆದ್ಲಾಯ ನಾಟಕೋತ್ಸವದಲ್ಲಿ ರಥಬೀದಿ ಗೆಳೆಯರು ಉಡುಪಿ ಇದರ ಆಯೋಜನೆಯಲ್ಲಿ ಪ್ರದರ್ಶನಗೊಂಡ ನಾಟಕ. ಕೇರಳದ ಯುವ ಪ್ರತಿಭಾನಿತ್ವ ನಿರ್ದೇಶಕ ಅರುಣ್‌ಲಾಲ್ ನಿರ್ದೇಶನದ ಒಂದು ಘಂಟೆ ಹದಿನೈದು ನಿಮಿಷದ ಈ ನಾಟಕ ಜನಸಾಮಾನ್ಯರ ದಿನನಿತ್ಯದ ಹೋರಾಟದ, ಛಲದ ಬದುಕಿನ ಕೆತೆಯ ಚಿತ್ರಣ. ಹಾಗೆಯೇ ಪ್ರತಿ ಫ್ರೇಮ್‌ನಲ್ಲೂ ಹಲವಾರು ಒಳನೋಟಗಳಿಂದ ಮನಸ್ಸನ್ನು ಅದ್ರಗೊಳಿಸುವ ನಾಟಕವೂ ಹೌದು.

ಜನಸಾಮಾನ್ಯರ ಹೋರಾಟದ ಕಥೆಯಿದು. ಇದು ಚಿಕ್ಕ ಮೌಲ್ಯದ, ದಿನನಿತ್ಯದ ಬಳಕೆಯ ಅತೀ ಅಗತ್ಯದ ಚಿಕ್ಕ ಚಿಕ್ಕ ವಸ್ತುಗಳ ಕೊಡುಕೊಳ್ಳುವಿಕೆ ಮೌಲ್ಯವಾಗಿ ಸದಾ ಕೆಳವರ್ಗದ ಜನರ ಒಡನಾಡಿಯಾಗಿ ಇರುವ ಚಿಲ್ಲರೆ ನಾಣ್ಯದ ಕತೆ. ಆದರೆ ಅದಷ್ಟೇ ಆಗದೆ ಇದರ ಮುಂದೆ ನಾಗರೀಕತೆಯ ಹೆಸರಲ್ಲಿ ಅಡಿಯಿಡುವ ಕರೆನ್ಸಿ ನೋಟುಗಳಿಗೆ ಪ್ರತಿರೋಧದ ಸಂಕೇತವಾಗಿಯೂ ಧ್ವನಿಸಲ್ಪಡುವ ಹೋರಾಟದ ಕತೆಯಿದು.

ಸಣ್ಣ ಸಣ್ಣ ಊರುಗಳಲ್ಲಿ ಸಣ್ಣ ಸಣ್ಣ ಗುಡಿಸಲು ಕಟ್ಟಿ, ಸಣ್ಣ ಸಣ್ಣ ಕಸುಬುಗಳೊಂದಿಗೆ, ಸಣ್ಣ ಸಣ್ಣ ಕನಸುಗಳನ್ನು ಹೆಣೆದು ಸಂತಸವಾಗಿ ಬದುಕುವ ಅದೆಷ್ಟು ಜನಸಮುದಾಯವಿದೆ. ಈ ಪ್ರತಿಯೊಂದು ಜನಸಮುದಾಯವೂ ತಮ್ಮದೇ ಆದ ಶ್ರೇಷ್ಠತೆ ಜನಪದದೊಂದಿಗೆ ಅದರದ್ದೇ ಆದ ಸಂಗೀತದೊಂದಿಗೆ ಭೂಮಿಗೆ ಹತ್ತಿರವಾಗಿ ಬದುಕುತ್ತಿದ್ದಾರೆ. ಹುಟ್ಟಿನಿದ ಆರಂಭಿಸಿ ಸಾವಿನ ನಂತರವೂ ಜೊತೆಯಾಗುವ ಈ ಭೂಮಿಯೊಂದಿಗಿನ ನಂಟುತನ ಮತ್ತು ಅದರೊಂದಿಗೆನ ಬೆಸೆದುಕೊಂಡ ಸಂಗೀತವೇ ಅವರಿಗೆ ಅಂತಿಮ. ಇದರ ಮುಂದೆ ನಾಗರೀಕತೆಯ ಯಾವುದೇ ಹೆಸರಲ್ಲಿ ನಡೆಯುವ ದಬ್ಬಾಳಿಕೆಗಳು ನಿಲ್ಲಲು ಸಾಧ್ಯವೇ ಇಲ್ಲ. ಆದರೆ, ಕೆಲವೊಮ್ಮೆ ಲಾಭ ಬಡುಕ ಅಧಿಕಾರ ದಾಹದ ಆಧುನಿಕ ಜೀವನ ಮತ್ತು ಬಂಡವಾಳಶಾಹಿ ಶಕ್ತಿಗಳು ಈ ಸಂಗೀತವನ್ನು ತಡೆದು ನಿಲ್ಲಿಸುವ ಪ್ರಯತ್ನ ಮಾಡಿದರೂ ತಮ್ಮತನವನ್ನು ಉಳಿಸಿಕೊಳ್ಳುವ ಸ್ವಾತಂತ್ರ್ಯ ಮತ್ತು ಛಲದ ಹಾಡುಗಳ ಮುಂದೆ ಎಲ್ಲಾ ಪ್ರತಿರೋಧಗಳು ಸವರಿ ಹೋಗುತ್ತವೆ. ಹೀಗಾಗಿ ಚಿಲ್ಲರೆ ನಾಣ್ಯದ ಸದ್ದುಗಳೊಂದಿಗೆ ಮತ್ತು ಭೂಮಿಯ ನಂಟುತನ ಬೆಸೆದುಕೊಂಡ ಹೋರಾಟದ ಹಾಡುಗಳೊಂದಿಗೆ ಚಿಲ್ಲರ ಸಮರಮ್ ಒಂದು ಪ್ರತಿಮಾ ನಾಟಕವಾಗಿ ಮುಖ್ಯವೆನಿಸುತ್ತದೆ.

ಪ್ರತಿಮೆಗಳಾಗುವ ಒಳನೋಟದ ಹಲವು ರೂಪಕ: ಇಪ್ಪತ್ತೈದು ಪೈಸೆ ನಾಣ್ಯವನ್ನು ಪ್ರಧಾನ ಭೂಮಿಕೆಯಲ್ಲಿರಿಸಿ ಬೆಂಕಿ ಪೊಟ್ಟಣವನ್ನು ಅದರ ಜೊತೆಯಾಗಿಸುವ ಪ್ರತಿಮೆಗಳು ನಮ್ಮೊಳಗನ್ನು ಸದಾ ಕಾಡುವ ರೂಪಕಗಳಾಗುತ್ತವೆ. ಬಹಳ ಪ್ರಖ್ಯಾತವಾದ ಅಯ್ಯಪ್ಪನ ಕತೆಯನ್ನಿಟ್ಟುಕೊಂಡು ಬಲೂನ್‌ಗಳ ಮೂಲಕ ಸೆಕ್ಯುಲರಿಸಂನ ಪಾಠ ಮಾಡುತ್ತವೆ. ಬೀಡಿ ಮತ್ತು ಸಿಗರೇಟುಗಳ ಪ್ರತಿಮೆಯನ್ನಿಟ್ಟುಕೊಂಡು ಧನಿಕರು ಮತ್ತು ಬಡವರ ನಡುವಿನ ಅಸಮಾನತೆಯನು ಸಾರಾಸಗಾಟಾಗಿ ದಿಕ್ಕರಿಸುತ್ತದೆ. ಚಿನ್ನ ಮತ್ತು ರೈತನನ್ನು ಪ್ರತಿಮೆಗಳಾಗಿಸಿ ಚಿತ್ರಿಸಿದ ರೀತಿ ಆಕರ್ಷಣೆ ಮತ್ತು ಸಹಜತೆಗಳ ನಡುವಿನ ಸಮರವನ್ನಾಗಿಸುತ್ತದೆ. ಟಿಶ್ಯೂ ಪೇಪರನ್ನು ಪ್ರತಿಮೆಯಾಗಿಸಿ ಕೂಲಿಕಾರ್ಮಿಕರಿಗೆ ಯೂನಿಫಾರ್ಮ್ ಹಾಕಿಸಿ ಕಾರ್ಪೋರೇಟ್ ಯಂತ್ರಗಳ ಅಡಿಯಾಳಾಗಿಸಿಕೊಡು ಯಾಂತ್ರಿಕ ಬದುಕಿನ ನಶ್ವರತೆಯನ್ನು ಮತ್ತು ಆಡಳಿತಶಾಹಿಗಳ ಒಳಗಣ ತಣ್ಣಗಿನ ಕ್ರೌರ್ಯವನ್ನು ಏಕಕಾಲಕ್ಕೆ ಅನಾವರಣಗೊಳಿಸುತ್ತದೆ. ಜನಸಾಮಾನ್ಯರನ್ನು ಆಕರ್ಷಕ ಜಾಹೀರಾತುಗಳಿಗೆ ಮೂರ್ಖರನ್ನಾಗಿಸಿ ಟಿಶ್ಯೂ ಪೇಪರ್‌ನಂತೆ ಬಳಸಿ ಎಸೆದು ಹತಾಶರನ್ನಾಗಿಸುವ ರೂಪಕ ನಾಟಕ ಮುಗಿದ ಮೇಲೂ ಬಹಳ ಕಾಲ ಕಾಡುತ್ತದೆ.

ಸರಳತೆ ದರ್ಶನ ಮತ್ತು ನೈಜತೆ ವಾಸ್ತವೀಕರಣ : ಚಿಲ್ಲರ ಸಮರಮ್ ಬಹಳವಾಗಿ ಆಪ್ತವಾಗುವುದು ಅದರ ಸರಳತೆಯಿಂದಾಗಿ. ಬಹಳ ಸಂಕೀರ್ಣವಾದ ವಸ್ತುವನ್ನು ಭಾಷೆಯ ಹಂಗಿಲ್ಲದೆ ಸರಳವಾಗಿ ಅರ್ಥೈಸುವಂತೆ ಹೆಣೆಯಲಾಗಿದೆ.

ವೈಭವೋಪೇತ ಸೆಟ್‌ಗಳಿಲ್ಲದೆ, ಅದ್ದೂರಿ ಕುಸುರಿ ಕೆಲಸಗಳನ್ನು ಒಳಗೊಂಡ ರಂಗಪರಿಕರಗಳಿಲ್ಲದೆ, ಆಕರ್ಷಕ ಪೋಷಾಕುಗಳಿಲ್ಲದೆ, ದಿನ ನಿತ್ಯ ಬಳಸುವ ರೀತಿ ಅದ್ಭುತವೆನಿಸುತ್ತದೆ. ಮೌನವನ್ನೂ ಸಂಗೀತವಾಗಿ ಧ್ಯಾನಿಸುವ, ಯಾವುದೇ ನಿರ್ಬಂಧಿತ ಪಕ್ಕವಾದ್ಯಗಳಿಲ್ಲದೆ ಜಾನಪದ ಲಯವನ್ನು ಹೋರಾಟದ ಹಾಡಾಗಿಸುವ ಮೂಲಕವೂ ಸರಳತೆಯನ್ನು ಸಂಗೀತದಲ್ಲಿಯೂ ಪರಿಣಾಮ ಕಾರಿಯಾಗಿಸುತ್ತದೆ. ಹೀಗೆ ಕಡಿಮೆ ಬಂಡವಾಳದಲ್ಲಿಯೂ ಪರಿಣಾಮಕಾರಿಯಾದ ಪ್ರಾಮಾಣಿಕ ಪ್ರಯತ್ನ ರಂಗಭೂಮಿಯಲ್ಲಿ ಸಾಧ್ಯ ಎನ್ನುವುದನ್ನು ಸಾಧಿಸಿ ತೋರಿಸಿದ ಸೃಜನಶೀಲ, ವಾಸ್ತವದ ನಾಟಕ ನೋಡಿದ ಅನುಭವ: ನಾಟಕವನ್ನು ನೋಡುಗನ ದೃಷ್ಟಿಯಲ್ಲಿ ಕಟ್ಟುವ ಕ್ರಿಯೆಯಲ್ಲಿ ಇತ್ತೀಚಿನ ದಿನಗಳಲ್ಲಿ ಗಮನಿಸಬೇಕಾದ ಅಂಶ ಬೆಳಕಿನ ವಿನ್ಯಾಸ. ಪಾರಂಪಾರಿಕ ಸ್ಪಾಟ್ ಮತ್ತು ಪಾರ್ ಲೈಟ್‌ಗಳ ಮೇಲೆ ಎಲ್‌ಇಡಿಗಳೆಂಬ ಮಾಯಾ ಬೆಳಕಿನ ಆರ್ಭಟ. ಅದು ಜನಪದದ ಮೇಲೆ ಬಂಡವಾಳಶಾಹಿಯ ಆಕ್ರಮಣದಷ್ಟೇ ಭೀಕರವಾದುದು. ನಟನ ದೇಹ ಭಾಷೆಯನ್ನು ಸಂಕುಚಿಸುವ ಮಾಯಾಬೆಳಕಿನ ಹಂಗಿಲ್ಲದೆ, ನಟನ ದೇಹ ಭಾಷೆಯನ್ನು ವಿಸ್ತರಿಸುವ ಪಾರಂಪರಿಕ ಲೈಟುಗಳ ಬಳಕೆ ನಾಟಕದ ಸಹಜ ಸುಂದರತೆಗೆ ಸಾಕ್ಷಿಯಾಯಿತು. ಜೀವಾಳವಾದ ನಟನೆ; ನಟನೆ ಅದು ನಾಟಕವನ್ನು ಎಲ್ಲಾ ತಾಂತ್ರಿಕ ವಿನ್ಯಾಸಗಳ ನಡುವೆಯೂ ಅಥವಾ ಅದೂ ಇಲ್ಲದೆಯೂ ದಾಟಿಸುವ ಅಂತಿಮ ಮತ್ತು ಮೂಲಭೂತ ಕ್ರಿಯೆ. ಸುಮಾರು 8 ಮಂದಿ ನಟರು ಒಂದಾದ ಮೇಲೆ ಒಂದರಂತೆ ವಿಭಿನ್ನ ಪೋಷಾಕಿನಲ್ಲಿ ಅದೇ ಶಕ್ತಿಯನ್ನಿಟ್ಟುಕೊಂಡು ಪ್ರತಿ ಪಾತ್ರಗಳನ್ನು ವಿಭಿನ್ನವಾಗಿ

ಕಾಣಿಸುವುದಿದೆಯಲ್ಲಾ ಅದು ನಿಜಕ್ಕೂ ಒಬ್ಬ ನಟನಿಗೆ ಸಮಸ್ಯೆ ಮತ್ತು ಸವಾಲೂ ಕೂಡಾ ಆಗಿರುತ್ತದೆ. ಚಿಲ್ಲರೆ ಸಮರಮ್ ನಾಟಕದ ಎಲ್ಲಾ ನಟರು ಸ್ಪರ್ಧೆಗೆ ಬಿದ್ದವರಂತೆ ಈ ಸವಾಲನ್ನು ಅತ್ಯಂತ ನಾಜೂಕಾಗಿ ನಿಭಾಯಿಸುತ್ತಾರೆ. ಲವಲವಿಕೆಯ ಶಕ್ತಿಯುತ ಮತ್ತು ಪಕ್ಕಾ ಟೈಮಿಂಗ್‌ನ ನಟರ ದೇಹಭಾಷೆಯ ನಡುವಿನ ವಿಕ್ಷಿಪ್ತ ಹೊಂದಾಣಿಕೆ ಅಗತ್ಯವಿರುವ ಈ ಕಥಾ ವಸ್ತುವನು ನಟರು ನಿಭಾಯಿಸಿದ ರೀತಿ ಅನನ್ಯವಾದುದು. ನಿರ್ದೇಶಕನ ಭಾಷೆಯಲ್ಲಿ ಹೇಳುವುದಾದರೆ ಈ ನಾಟಕ ಯಾರೂ ನಕಲು ಮಾಡಲು ಸಾಧ್ಯವಾಗದ ಅಥವಾ ಅದೇ ನಿರ್ದೇಶಕ ಇನ್ನೊಂದು ಗುಂಪಿಗೆ ಪುನರಪಿ ಇದನ್ನು ನಿರ್ವಹಿಸಲಾಗದ ಅದಮ್ಯ ಹೊಂದಾಣಿಕೆ ನಾಟಕ ಎನ್ನುವುದನ್ನು ಅಷ್ಟೇ ಸತ್ಯ.

ಅಂತಿಮವಾಗಿ ಇದು ನಟರ ನಾಟಕ:

ನಾಟಕಕಕಾರ ಮತ್ತು ನಿರ್ದೇಶಕ ಇವರಿಬ್ಬರ ಅರ್ಥ ಸಾಧ್ಯತೆಗಳ ವಿಸ್ತರಣೆಯನ್ನು ತನ್ನ ಮನೋರಂಗದಲ್ಲಿ ಕಟ್ಟಿಕೊಂಡು ಬೆಳೆಸಿ; ಮಾಗಿಸಿ ಅಂತಿಮವಾಗಿ ಪ್ರತೀ ಪ್ರದರ್ಶನವೂ ಹೊಸತೆಂಬಂತೆ ಪ್ರೇಕ್ಷಕರಲ್ಲಿ ರಸಾನುಭವವನ್ನು ಉಂಟುಮಾಡುವ ನಟ ರಂಗಭೂಮಿಕೆ ಪ್ರಧಾನ ಮತ್ತು ಅಂತಿಮ ಬಿಂದುವೇ ಹೌದು. ವಿನ್ಯಾಸ ಮತ್ತು ರಂಗತಂತ್ರಗಳ ನಡುವೆ ತನ್ನ ಅಸ್ತಿತ್ವಕ್ಕಾಗಿ ಹೆಣಗಾಟ ನಡೆಸಬೇಕಾದ ನಟ ಇವತ್ತಿನ ರಂಗಭೂಮಿಯಲ್ಲಿ ತನ್ನಗತ್ಯವನ್ನು ಕಳೆದುಕೊಳ್ಳುತ್ತಿದ್ದಾನೆ. ಅಂದರೆ ನಿರ್ದೇಶನದ ಪ್ರಕ್ರಿಯೆಯಲ್ಲಿ ನಟರನ್ನು ಸಿದ್ಧಗೊಳಿಸುವ ಪ್ರಕ್ರಿಯೆ ಗೌಣವಾಗಿ ಕೇವಲ ಕೆಲಸ ನಿರ್ವಹಿಸುವ ಸರಕು ಮಾತ್ರವಾದರೆ ಸಾಕು ಎಂಬ ಕಲ್ಪನೆ ಬೆಳೆಯುತ್ತಿರುವ ಈ ಹೊತ್ತಿನಲ್ಲಿ ನಟ ಪರಂಪರೆ ಎನ್ನುವುದು ಕಡೆಗಣಿಸಲ್ಪಟ್ಟಿದೆ. ಆದರೆ ಚಿಲ್ಲರ ಸಮರಮ್ ಆ ಎಲ್ಲಾ ನಿರ್ದೇಶಕರಿಗೆ ಉತ್ತರ ಕೊಡುತ್ತಿದೆ. ಇದರಿಂದ ಅದು ನಟರ ನಾಟಕವಾಗುತ್ತದೆ. ಅದರ ಮೂಲಕ ನಿರ್ದೇಶಕನ ಘನತೆ ಇನ್ನೂ ಹೆಚ್ಚಿಸಿದೆ.

ನಾಟಕಕಾರ ಮತ್ತು ನಿರ್ದೇಶಕ

ಪಠ್ಯ ಮತ್ತು ಪ್ರದರ್ಶನ ಎರಡೂ ಒಂದು ರಂಗ ಕೃತಿಯನ್ನು ಸಶಕ್ತಗೊಳಿಸುತ್ತವೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಈ ನೆಲೆಯಲ್ಲಿ ನಾಟಕಕಾರ ಮತ್ತು ನಿರ್ದೇಶಕ ಇಲ್ಲಿ ಪ್ರಮುಖ ಪಾತ್ರಗಳೇ. ರಾಜೇಶ್‌ರ ಪಠ್ಯವನ್ನು ನಿರ್ದೇಶಕ ಅರುಣ್‌ಲಾಲ್ ಒಂದು ಅಪರೂಪದ ರಂಗ ಕೃತಿಯಾಗಿಸುತ್ತಾರೆ. ಸಣ್ಣ ಸಂಗತಿಗಳನ್ನು ಪ್ರತಿಮೆಗಳಾಗಿಸಿ ಬಹಳ ಸಂಕೀರ್ಣ ವಿಷಯಗಳನ್ನು ಹೊರಗೆಡಹುವ ರೂಪಕಗಳನ್ನು ಸೃಷ್ಟಿಸಿದ ನಾಟಕಕಾರ ಮತ್ತು ಮತ್ತು ಪ್ರದರ್ಶನ ಪಠ್ಯಕ್ಕೆ ಭಾಷಾ ಸಮುದಾಯದ ಮಿತಿಯನ್ನು ಮೀರಿಕಾಲದ ಮನೋಧರ್ಮಕ್ಕೆ ಅನುಸಂಧಾನಗೊಳಿಸಿ ಹೊಸ ಓದಿಗೆ ಕಾರಣನಾದ ನಿರ್ದೇಶಕ ಇಬ್ಬರೂ ಅಭಿನಂದನಾರ್ಹರೇ.

ಪ್ರಜಾವಾಣಿ, ಕರಾವಳಿ ಪುರವಣಿ–2019



ಗಿರೀಶ್ ಕಾರ್ನಾಡರೊಂದಿಗೆ ರಥಬೀದಿ ಗೆಳೆಯರು



